# ಮಾಧ್ಯಮ ಮಂಗಳ

ಸಂಪುಟ: 12   ಸಂಚಿಕೆ: 1   ಮಂಗಳೂರು ವಿಶ್ವವಿದ್ಯಾನಿಲಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ  ದಿನಾಂಕ: ಸೆಪ್ಟೆಂಬರ್ 19, 2016

## 1857ರ ದಂಗೆ ಕೇವಲ ಒಂದು ಘಟನೆ ಅಲ್ಲ, ಅದು ಒಂದು ಕ್ರಾಂತಿ: ಪ್ರೊ.ಸುರೇಂದ್ರ ರಾವ್



"ಆಜಾದ್–70 ಯಾದ್ ಕರೋ ಕುರ್ಬಾನಿ" ಹಾಗೂ "ಸಾಮೂಹಿಕ ರಾಷ್ಟ್ರಗೀತೆ" ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕ ಬಿ. ಸುರೇಂದ್ರ ರಾವ್ ಮಾತನಾಡುತ್ತಿರುವುದು.

**ಮಂಗಳಗಂಗೋತ್ರಿ:** 1857ರ ದಂಗೆ ಕೇವಲ ಒಂದು ಘಟನೆ ಅಲ್ಲ, ಅದು ಒಂದು ಕ್ರಾಂತಿ ಹಾಗೂ ಮುಂದಿನ ಹಲವಾರು ಹೋರಾಟಗಳಿಗೆ ಸ್ಪೂರ್ತಿ ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ.ಬಿ. ಸುರೇಂದ್ರ ರಾವ್ ಅವರು ತಿಳಿಸಿದರು.

ಅವರು ಮಂಗಳೂರು ವಿವಿಯಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ವತಿಯಿಂದ ಆಯೋಜಿಸಿದ್ದ "ಆಜಾದ್ –70 ಯಾದ್ ಕರೋ ಕುರ್ಬಾನಿ" ಹಾಗೂ "ಸಾಮೂಹಿಕ ರಾಷ್ಟ್ರಗೀತೆ" ಎಂಬ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ನಾವು ಬ್ರಿಟೀಷರಿಂದ ಸ್ವಾತಂತ್ರ್ಯವನ್ನು ಅಹಿಂಸಾ ಮಾರ್ಗದ ಮೂಲಕ ಪಡೆದಿದ್ದೇವೆ ಎಂಬುವುದು ಭಾಗಶಃ ಸತ್ಯ. ಯಾಕೆಂದರೆ 1857ರ ದಂಗೆ ಅತ್ಯಂತ ಕ್ರೂರತೆಯಿಂದ ಕೂಡಿತ್ತು. ಈ ದಂಗೆಯಿಂದ ಸಾವಿರಾರು ಮುಗ್ಧ ಭಾರತೀಯ ಮತ್ತು ಬ್ರಿಟೀಷರು ತಮ್ಮ ಜೀವ ಕಳೆದುಕೊಂಡಿದ್ದಾರೆ. ಈ ದಂಗೆಯಲ್ಲಿ ಪಾಲ್ಗೊಂಡಿದ್ದ ಭಾರತೀಯರು ಅನುಭವಿಸಿದ ಶಿಕ್ಷೆ ಅತ್ಯಂತ ಕ್ರೂರವಾಗಿತ್ತು. 1857ರ ದಂಗೆ ಕೇವಲ ಸಿಪಾಯಿ ದಂಗೆ ಆಗಿರಲಿಲ್ಲ. ಅದು ಬ್ರಿಟೀಷರ ವಿರುದ್ದ ವಿವಿಧ ಕಾರಣಗಳಿಂದ ಕೋಪಗೊಂಡಿದ್ದ ಭಾರತೀಯ ಆಡಳಿತಗಾರರು ಹಾಗೂ ಸೈನಿಕರು ಒಟ್ಟಾಗಿ ಸಿಡಿದೆದ್ದ ಚಳುವಳಿಯಾಗಿತ್ತು. ಆದ್ದರಿಂದ ಇದನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಹೇಳುವುದು ಸೂಕ್ತ ಎಂದು ರಾವ್ ಅವರು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಮಾತನಾಡುತ್ತಾ ಪ್ರೊ. ನಾವು ಈಗ ಪುಸ್ತಕ ಮತ್ತು ಸಿನಿಮಾಗಳಲ್ಲಿ ನೋಡುತ್ತಿರುವ ಚರಿತ್ರೆಯು ನೈಜ ಸನ್ನಿವೇಶಗಳಿಗಿಂತ ಭಿನ್ನವಾಗಿದೆ ತಿಳಿಸಿದರು.

ಕಾರ್ಯಕ್ರಮದಲ್ಲಿ ವ್ಯವಹಾರ ಅಧ್ಯಯನ ವಿಭಾಗದ ಪ್ರೊ. ಪಿ.ಎಸ್.ಯಡಪಡಿತ್ತಾಯ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶನಾಲಯದ ನಿರ್ದೇಶ ಕರಾದ ಪ್ರೊ. ಬಿ ಉದಯ ಅವರು ಹಾಜರಿದ್ದರು.

## ಪತ್ರಕರ್ತರಾಗುವ ಮುನ್ನ ಮಾನವರಾಗಿ: ಮನೋಹರ್ ಪ್ರಸಾದ್



**ಮಂಗಳಗಂಗೋತ್ರಿ:**"ಪತ್ರಕರ್ತನಾದವನು ತನ್ನ ಸಮಾಜದ ಸಂವೇದನೆಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು ಮತ್ತು ತನ್ನ ಸುತ್ತಮುತ್ತಲಿನ ಆಗುಹೋಗುಗಳಿಗೆ ಸ್ಪಂದಿಸುವ ಗುಣ ಹೊಂದಿರಬೇಕು." ಎಂದು ಉದಯವಾಣಿಯ ಬ್ಯುರೊ ಮುಖ್ಯಸ್ಥ ಹಾಗೂ ಮಂಗಳೂರು ವಿ.ವಿ. ಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಅತಿಥಿ ಉಪನ್ಯಾಸರಾದ ಪ್ರಾಧ್ಯಾಪಕ ಮನೋಹರ್ ಪ್ರಸಾದ್ ಹೇಳಿದರು.

ಪತ್ರಿಕೋದ್ಯಮ ವಿಭಾಗದಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ವರದಿಗಾರಿಕೆ ಮತ್ತು ಬರವಣಿಗೆ' ಕುರಿತು ಅವರು ಮಾತನಾಡುತ್ತಿದ್ದರು.

'ಆತ್ಮ ವಿಶ್ವಾಸವೆಂಬುದು ಪ್ರತಿಯೊಬ್ಬ ಪತ್ರಕರ್ತನ ಯಶಸ್ಸಿನ ಕೀಲಿಕೈ. ಸಮಾಜದ ಸೂಕ್ಷ್ಮ ವಿಚಾರಗಳ ಕಡೆಗೆ ಹೆಚ್ಚು ಗಮನಹರಿಸಬೇಕು' ಎಂದು ತಿಳಿಸಿದರು. ಪತ್ರಿಕೋದ್ಯಮ ವಿದ್ಯಾರ್ಥಿಗಳು ಮುಖ್ಯವಾಗಿ ಓದು ಮತ್ತು ಬರಹಗಳ ಕಡೆಗೆ ಹೆಚ್ಚಿನ ಒತ್ತು ನೀಡಬೇಕು, ಅವು ಎಲ್ಲಾ ವಿಷಯಗಳಲ್ಲಿ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಲು ಸಹಕಾರಿ ಎಂದು ವಿದ್ಯಾರ್ಥಿಗಳಿಗೆ ಅವರು ಕಿವಿಮಾತು ನೀಡಿದರು.

ಎಂ.ಸಿ.ಜೆ. ವಿಭಾಗದ ಪ್ರಾಧ್ಯಾಪಕರಾದ ಡಾ. ಜಿ.ಪಿ. ಶಿವರಾಂ ಸ್ವಾಗತಿಸಿದರು. ವಿಭಾಗದ ಅಧ್ಯಕ್ಷೆ ಪ್ರೊ. ವಹೀದಾ ಸುಲ್ತಾನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಹೆಣ್ಣು ಮಕ್ಕಳನ್ನು ನಿಷೇಧಕಗಳಿಂದ ರೂಪಿಸಲಾಗುತ್ತಿದೆ: ಡಾ. ಕವಿತಾ ರೈ



**ಮಂಗಳಗಂಗೋತ್ರಿ:** "ಗಂಡು–ಹೆಣ್ಣು ಜೈವಿಕ ಲಕ್ಷಣದ ಎರಡು ಜಾತಿಗಳು. ಮನೆಯೊಳಗಿದ್ದೂ ನೆಮ್ಮದಿಯಾಗಿ ಬದುಕುವುದಕ್ಕೆ ಅವಕಾಶ ನೀಡದೆ ಹೆಣ್ಮಕ್ಕಳನ್ನು ನಿಷೇಧಕಗಳಿಂದ ರೂಪಿಸಲಾಗುತ್ತಿದೆ" ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರಿನ ಕನ್ನಡ ಅಧ್ಯಯನ ವಿಭಾಗದ ಸಹಪ್ರಾಧ್ಯಾಪಕಿ ಹಾಗೂ ಖ್ಯಾತ ಕವಯಿತ್ರಿ ಡಾ. ಕವಿತಾ ರೈ ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯ ಸಾಂಸ್ಕೃತಿಕ ವೇದಿಕೆಯ ವತಿಯಿಂದ ನಡೆದ 'ನಿರಂತರ' ಕಾರ್ಯಕ್ರಮದಲ್ಲಿ 'ಸ್ತ್ರೀವಾದಿ ಚಿಂತನೆಯ ತಾತ್ವಿಕತೆಗಳು' ಕುರಿತು ಉಪನ್ಯಾಸ ನೀಡಿದರು.

ದೆಹಲಿ ಅತ್ಯಾಚಾರದ ಕುರಿತ 'ಇಂಡಿಯಾಸ್ ಡಾಟರ್' ಎನ್ನುವ ಸಾಕ್ಷ್ಯಚಿತ್ರ ಮತ್ತು ಸ್ತ್ರೀಯ ಆಯ್ಕೆಯ ಕುರಿತ 'ಮೈ ಚಾಯ್ಸ್' ಎನ್ನುವ ಕಿರುಚಿತ್ರ, ಇವೆರಡನ್ನೂ ರೂಪಕಗಳನ್ನಾಗಿಟ್ಟುಕೊಂಡು ಮಾತು ಆರಂಭಿಸಿದ ಅವರು, 2015ರ ವರ್ಷ ಮಹಿಳಾ ಚಿಂತನೆಯ ಬಗ್ಗೆ, ಸ್ತ್ರೀವಾದಿ ರಾಜಕೀಯ ಮೀಮಾಂಸೆಯ ಬಗ್ಗೆ ಸವಾಲೊಡ್ಡಿದ ವರ್ಷ. ಎಲ್ಲಾ ರಾಜಕೀಯ ಮೀಮಾಂಸೆಗಳಂತೆ ಸ್ತ್ರೀವಾದವೂ ಒಂದು ರಾಜಕೀಯ ಮೀಮಾಂಸೆ. ಆದರೆ, ಸ್ತ್ರೀವಾದಿ ಮೀಮಾಂಸೆ ಯುದ್ಧ ಪ್ರೇರಿತವಲ್ಲ. ಸಮಾಜದಲ್ಲಿ ಪ್ರತಿಯೊಂದು ರಂಗದಲ್ಲೂ 'ಸ್ತ್ರೀ'ಯ ಜೀವನದ ಅಭಿವ್ಯಕ್ತಿಯ ಅವಕಾಶಕ್ಕಾಗಿ ಸ್ತ್ರೀವಾದದ ಹೋರಾಟ ಎಂದು ಹೇಳಿದರು.

ಜಾನಪದ ಹಾಡೊಂದನ್ನು ಉದಾಹರಿಸಿಕೊಂಡು, 'ಹೆಣ್ಣು ಹೋದ ಮನೆಯಲ್ಲೂ ತನ್ನ ಸ್ವಾತಂತ್ರಯವನ್ನು ಅನುಭವಿಸದ ಹಾಗೆ ತಾಯಿ ಉಪದೇಶಿಸುವ ಎಂಟು ಸಾಲಿನ ಪದ್ಯ ನಿಜವಾದ ಭಗವದ್ಗೀತೆ' ಎಂದು ವ್ಯಂಗ್ಯವಾಡಿದರು. ಮಗಳು ತವರು ಮನೆಯಲ್ಲಿ ತನ್ನ ಕೊರಳಿಗೆ ತಾನೇ ಹಗ್ಗ ಕಟ್ಟಿ ಗೂಟವನ್ನು ತನ್ನ ಕೈಯಿಂದಲೇ ಹೊಡೆಯುತ್ತಾಳೆ. ನಗುವಿನ, ಮಾತಿನ ಸ್ವಾತಂತ್ರ್ಯಕ್ಕೆ 'ಸ್ತ್ರೀ' ಎನ್ನುವ ಕಾರಣಕ್ಕೆ ತಡೆಯೊಡ್ಡುವ ಮೂಲಕ ಹೆಣ್ಮಕ್ಕಳನ್ನು ನಿಷೇಧಕಗಳಿಂದ ರೂಪಿಸಲಾಗುತ್ತಿದೆ. ಯಾವುದೇ ಗಂಡಿನಲ್ಲಿ ಪೂರ್ತಿ ಗಂಡಿನ ಅಂಶವಿದ್ದರೆ ಅವನಿಗೆ ಹೆಣ್ಣು ಅರ್ಥವಾಗಲಾರಳು, ಇದು ಹೆಣ್ಣಿಗೂ ಅನ್ವಯಿಸುತ್ತದೆ. ಪೂರ್ತಿ ಗಂಡಾದರೆ ಏನಾಗಬಹುದು ಎಂಬುವುದಕ್ಕೆ ಹಿಟ್ಲರ್ ಮತ್ತು ಮುಸ್ಸೊಲೊನಿ ಎಂಬ ಸರ್ವಾಧಿಕಾರಿಗಳನ್ನು ಸಾಕ್ಷಿಯಾಗಿಸಬಹುದು ಎಂದವರು ನುಡಿದರು.

ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಪ್ರೊ. ಬಿ. ಶಿವರಾಮ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕನ್ನಡ ಎಂ.ಎ. ವಿಭಾಗದ ವಿದ್ಯಾರ್ಥಿಗಳು, ಸಂಶೋಧನಾ ವಿಭಾಗದ ವಿದ್ಯಾರ್ಥಿಗಳು ಮತ್ತಿತರರು ಉಪಸ್ಥಿತರಿದ್ದರು.

## ವಿಶ್ವವಿದ್ಯಾನಿಲಯಗಳು ಮೂಲ ಸೌಕರ್ಯದ ಕೊರತೆ ನೀಗಿಸಬೇಕು: ಪ್ರೊ.ಜೆ.ಮಾದೇಗೌಡ

ಮಂಗಳಗಂಗೋತ್ರಿ: ಇಂದು ವಿಶ್ವವಿದ್ಯಾನಿಲಯಗಳು ಮೂಲ ಸೌಕರ್ಯ ಹಾಗೂ ಸಿಬ್ಬಂದಿ ಕೊರತೆ ಎದುರಿಸುತ್ತಿದೆ. ಇದರಿಂದ ಉನ್ನತ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ. ಸರ್ಕಾರದ ನೀತಿಗಳು ಪರಿಣಾಮಕಾರಿಯಾಗಿಲ್ಲ. ಎಂದು ಕುವೆಂಪು ವಿವಿಯ ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಜೆ. ಮಾದೇಗೌಡ ಅವರು ತಿಳಿಸಿದರು.

ಇತ್ತೀಚೆಗೆ ಮಂಗಳೂರು ವಿವಿಯ ವಾಣಿಜ್ಯ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ಕಾ ಂ ು ್ ು ರ್ಾ ಗಾ ರ ್ ವ ್ ನ ್ ು ಉದ್ಘಾಟಿಸಿ ಮಾತನಾಡುತ್ತಾ, ವಿಶ್ವವಿದ್ಯಾನಿಲಯಗಳ ಸಂಖ್ಯೆ ಹೆಚ್ಚುತ್ತಿದೆ ಆದರೆ ಉನ್ನತ ಶಿಕ್ಷಣದ ಬೆಳವಣಿಗೆ ಅನುಪಾತ ಹೆಚ್ಚುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದ




ಅವರು ವಿಶ್ವವಿದ್ಯಾನಿಲಯಗಳಲ್ಲಿ ಮೂಲ ಸೌಕರ್ಯ ಹಾಗೂ ಸಿಬ್ಬಂದಿ ಕೊರತೆ ನೀಗಿಸಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಮಂಗಳೂರು ವಿವಿಯ ಕುಲಸಚಿವ ಪ್ರೊ.ಕೆ.ಎಂ. ಲೋಕೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಮುನಿರಾಜು, ಪ್ರೊ. ಪಿ.ಎಸ್ ಯಡಪಡಿತ್ತಾಯ, ಡಾ. ರಘುರಾಮ್, ಹಾಗೂ ಡಾ. ಟಿ.ಪಿ. ಎಂ. ಪಕ್ಕಳ ಭಾಗವಹಿಸಿದ್ದರು. ಕಾರ್ಯಾಗಾರದ ಸಂಯೋಜಕ ಡಾ. ವೇದವ. ಪಿ. ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕಿ ಡಾ. ಪ್ರೀತಿ ಕೀರ್ತಿ ಡಿಸೋಜ ಕಾರ್ಯಕ್ರಮ ನಿರ್ವಹಿಸಿದರು. ಪ್ರಾಧ್ಯಾಪಕ ಡಾ. ಈಶ್ವರ್ ವಂದಿಸಿದರು.




**ಮಂಗಳೂರು ವಿಶ್ವವಿದ್ಯಾನಿಲಯದ ಕ್ರೀಡಾ ವಿಭಾಗದ ವಿದ್ಯಾರ್ಥಿಗಳು ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಗಸ್ಟ್ 29 ರಂದು ಆಚರಿಸಿದರು. ಇದರ ಅಂಗವಾಗಿ ಕ್ಯಾಂಪಸ್‌ನ ಎಲ್ಲಾ ವಿಭಾಗಗಳಿಗೆ ಸಿಹಿ ಹಂಚುವ ಮೂಲಕ ಶುಭಾಶಯ ಕೋರಿದರು.**

## ಸಂಪಾದಕೀಯ

### ದೇಶ ವಿರೋಧಿ ಘೋಷಣೆ ಕೂಗುವ ಮುನ್ನ......

ಕೆಲ ತಿಂಗಳ ಹಿಂದೆ ದೆಹಲಿಯ ಜವಹಾರ್‌ಲಾಲ್ ನೆಹರೂ ವಿವಿಯಲ್ಲಿ ಕೆಲ ವಿದ್ಯಾರ್ಥಿಗಳು ದೇಶದ್ರೋಹ ಘೋಷಣೆ ಕೂಗಿದ್ದರೆಂಬ ಆರೋಪವು ಮಾಸುವ ಮುನ್ನವೇ ಬೆಂಗಳೂರಿನ ಕಾಲೇಜೊಂದರಲ್ಲಿ ಎನ್‌ಜಿಒ ಸಂಸ್ಥೆಯು ಅದೇ ರೀತಿಯ ದೇಶವಿರೋಧಿ ಘೋಷಣೆ ಕೂಗಿದ ಪ್ರಕರಣ ದೊಡ್ಡ ರಾದ್ದಾಂತವನ್ನೇ ಹುಟ್ಟು ಹಾಕಿದೆ. ಕಾಶ್ಮೀರದಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚಿಸುವ ನೆಪದಲ್ಲಿ ಬೆಂಗಳೂರಿನ ಕಾಲೇಜೊಂದರಲ್ಲಿ ಸಭೆ ನಡೆಸಿದ ಆ್ಯಮ್ನೆಸ್ಟಿ ಇಂಟರ್‌ನ್ಯಾಷನಲ್ ಎಂಬ ಮಾನವ ಹಕ್ಕುಗಳ ಪರ ಹೋರಾಡುವ ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ) ಈ ಚರ್ಚೆಯ ಕೇಂದ್ರ ಬಿಂದು. ಈ ಸಭೆಯಲ್ಲಿ ನಮ್ಮ ದೇಶದ ಸೇನೆಯ ವಿರುದ್ಧ ಘೋಷಣೆ ಕೂಗಿದ್ದಾರೆಂಬುವುದು ಆರೋಪ. ಮೊದಲನೆಯದಾಗಿ ನಮಗೆ ನಿಶ್ಚಿಂತೆಯಿಂದ ಬದುಕಲು ಅವಕಾಶ ಮಾಡಿಕೊಟ್ಟ ರಾಷ್ಟ್ರದ ಬಗ್ಗೆ ಮತ್ತು ನಮ್ಮನ್ನು ರಕ್ಷಣೆ ಮಾಡುವ ಸೇನೆಯ ವಿರುದ್ಧ ಮಾತನಾಡುವುದು ದೊಡ್ಡ ಅಪರಾಧವೇ ಸರಿ. ಇದು ಉಂಡ ಮನೆಗೆ ದ್ರೋಹ ಬಗೆದಂತಾಗುತ್ತದೆ. ಇದರ ಮೂಲಕ ನಮ್ಮ ದೇಶದ ಭದ್ರತಾ ಪಡೆಗಳ ಮಾನಸಿಕ ಸ್ಥೈರ್ಯವನ್ನು ಕುಂದಿಸಿದಂತಾಗುತ್ತದೆ. ಇಂದು ಪ್ರಪಂಚದಲ್ಲಿಯೇ ಅತ್ಯಂತ ಬಲಿಷ್ಠ ಸೇನಾ ಬಲ ಹೊಂದಿರುವ ಸೇನೆ ನಮ್ಮದು. ಭಾರತದ ಗಡಿ ಪ್ರದೇಶದಲ್ಲಿ ಪರಿಸ್ಥಿತಿಯು ಅತ್ಯಂತ ಭಿನ್ನವಾಗಿದೆ. ಜೊತೆಗೆ ದೇಶದ ಮೇಲೆ ಉಗ್ರರ ನೆರಳು ಸದಾ ಕಾಡುತ್ತಿರುತ್ತದೆ. ಇಷ್ಟೆಲ್ಲಾ ಸಮಸ್ಯೆ ಇರುವಾಗ, ದೇಶದ ಮೇಲೆ ಯಾವುದೇ ದಾಳಿ ನಡೆಯದಂತೆ ಹಾಗೂ ನಡೆದರೆ ಅದನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ಇರುವುದು ಸೈನ್ಯಕ್ಕೆ ಮಾತ್ರ. ಮತ್ತೊಂದು ಪ್ರಮುಖ ಅಂಶ ಎಂದರೆ ಲಕ್ಷಾನುಗಟ್ಟಲೆ ಸೈನಿಕರು ತಮ್ಮ ಕುಟುಂಬ ಮತ್ತು ಜೀವದ ಹಂಗು ತೊರೆದು ದೇಶ ಸೇವೆಗೆ ಸದಾ ಸನ್ನದ್ದರಾಗುತ್ತಿರುತ್ತಾರೆ. ಇದರ ಮಧ್ಯೆ ಸೇನೆಯ ಬಗ್ಗೆಯೇ ಅಪಪ್ರಚಾರ ಮಾಡುವುದು ಮತ್ತು ಅದರ ವಿರುದ್ದ ಘೋಷಣೆ ಕೂಗುವುದು ವಿಪರ್ಯಾಸವೇ ಸರಿ. ಇನ್ನು ಜಮ್ಮು ಕಾಶ್ಮೀರದ ವಿಷಯಕ್ಕೆ ಬಂದರೆ ಅಲ್ಲಿನ ಪರಿಸ್ಥಿತಿ ಇಡೀ ದೇಶದ ಪರಿಸ್ಥಿತಿಗಿಂತ ಅತ್ಯಂತ ಭಿನ್ನವಾಗಿದೆ. ಅಲ್ಲಿ ಸೈನ್ಯವು ತನ್ನದೇ ಆದ ನೀತಿ ನಿಯಮಗಳನ್ನು ಹೊಂದಿದೆ. ಅದು ಅಲ್ಲಿನ ಜನರಿಗೆ ಕಷ್ಟವಾಗುತ್ತದೆ ಎಂಬುವುದೂ ಸತ್ಯದ ವಿಚಾರ. ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬ ವಿಚಾರವನ್ನು ಮುಂದಿಟ್ಟುಕೊಂಡು ಸೈನ್ಯದ ಬಗ್ಗೆ ಅತ್ಯಂತ ಹಗುರವಾಗಿ ಮಾತನಾಡುವುದು, ಸೈನ್ಯದ ವಿರುದ್ಧ ಘೋಷಣೆ ಕೂಗುವುದು ಅತ್ಯಂತ ದೊಡ್ಡ ಅಪರಾಧವೇ ಸರಿ.

ಇದರ ಹೊರತಾಗಿ ಚಿಂತನೆ ನಡೆಸುವುದಾದರೆ ಭಾರತದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸಗಳು ನಡೆಯುತ್ತಿದೆ. ಪ್ರಜ್ಞಾವಂತರು ತಮ್ಮ ಅಭಿಪ್ರಾಯಗಳನ್ನು ಮಂಡಿಸುವುದೇ ತಪ್ಪು ಎಂಬಂತೆ ಬಿಂಬಿಸಲಾಗುತ್ತಿದೆ. ಅದು ರಾಜಕೀಯ ಪಕ್ಷಗಳ ಬಗ್ಗೆ ಆಗಿರಬಹುದು ಅಥವಾ ಸರಕಾರದ ವಿರುದ್ಧವೇ ಆಗಿರಬಹುದು; ಮಾತನಾಡಲೇ ಕೂಡದು ಎಂಬಂತೆ ನಡೆಸಲಾಗುತ್ತಿದೆ. ದೇಶದ್ರೋಹದ ಪ್ರಕರಣದ ಅರ್ಥವನ್ನೇ ಇಂದು ಬದಲಿಸಲಾಗುತ್ತಿದೆ. ಕೇವಲ ಸರಕಾರಗಳ ವಿರುದ್ಧ ಮಾತನಾಡಿದರೆ ಸಾಕು, ಅದಕ್ಕೆ ದೇಶ ದ್ರೋಹದ ಪಟ್ಟವನ್ನು ಕಟ್ಟುವ ವ್ಯವಸ್ಥಿತ ಸಂಚು ನಡೆಯುತ್ತಿರುವುದು ವಿಪರ್ಯಾಸ. ಈ ಎಲ್ಲಾ ಘಟನಾವಳಿಗಳು ಪ್ರಜಾಪ್ರಭುತ್ವತ್ವ ವ್ಯವಸ್ಥೆಗೇ ಮಾರಕವಾಗಿ ಪರಿಣಮಿಸಿದೆ. ಒಂದೆಡೆ ಅಭಿವ್ಯಕ್ತಿ ಸ್ವಾತಂತ್ರ್ಯದ ದುರ್ಬಳಕೆಯಾಗುತ್ತಿದ್ದರೆ, ಇನ್ನೊಂದೆಡೆ ಅಭಿವ್ಯಕ್ತಿ ಸ್ವತಂತ್ರ್ಯವನ್ನು ಕಸಿಯಲಾಗುತ್ತಿದೆ ಎಂಬ ಮಾತು ಪ್ರಸಕ್ತ ಘಟನಾವಳಿಗಳಿಗೆ ಪುಷ್ಟಿ ನೀಡಿವೆ. ಒಟ್ಟಾರೆ ದೇಶದ ಸಾರ್ವಭೌಮ ವ್ಯವಸ್ಥೆಗೆ, ಜಾತ್ಯಾತೀತ ವ್ಯವಸ್ಥೆಗೆ ಮತ್ತು ದೇಶದ ಭಧ್ರತೆಗೆ ಧಕ್ಕೆ ಬಾರದ ರೀತಿಯಲ್ಲಿ ಅಭಿವ್ಯಕ್ತಿ ಸ್ವತಂತ್ರ್ಯವೆಂಬ ಅಸ್ತ್ರದ ಬಳಕೆಯಾಗಬೇಕಿದೆ. ಈ ಬಗ್ಗೆ ದೇಶದ ಪ್ರಜ್ಞಾವಂತರಾದ ನಾವು ಅಭಿವ್ಯಕ್ತಿ ಸ್ವಾತಂತ್ರವನ್ನು ಬಳಸುವ ಮೂಲಕ ದೇಶಕ್ಕೆ ಮಾರಕವಾದ ವಿಚಾರಗಳನ್ನು, ತಪ್ಪುಗಳನ್ನು ಸರಿಪಡಿಸುವ ಕೆಲಸ ನಡೆಯಬೇಕಿದೆ.

**– ರಾಜೇಶ್ ಫೆರಾವೋ**

## ದೇಶ ಮೊದಲೋ? ಧರ್ಮ ಮೊದಲೋ?

ಹಿಂದೂ, ಮುಸ್ಲಿಂ ಕ್ರೈಸ್ತ ಈ ಮೂರು ಪದಗಳು ಒಮ್ಮಿಳಿತವಾಗಿ ಉಚ್ಚರಿಸಲ್ಪಡುವ ಏಕೈಕ ದೇಶ ನಮ್ಮ ಭಾರತ. "ವಿವಿಧತೆಯಲ್ಲಿ ಏಕತೆ" ಎಂಬ ತತ್ವವೇ ಭಾರತದ ಪವಿತ್ರ ಮಣ್ಣಿನ ಕಣ–ಕಣದಲ್ಲಿಯೂ ಹುದುಗಿ ಹೋಗಿದೆ. ಇನ್ನು ಈ ತತ್ವವನ್ನೇ ಮೈಗೂಡಿಸಿಕೊಂಡು ನಿಂತಿರುವ ಭಾರತಾಂಬೆ ಎಷ್ಟು ನಿಷ್ಕಲ್ಮಶಳು ಎಂಬುದು ಊಹನೆಗೆ ನಿಲುಕದ್ದು. ಅಂತಹ ಭಾರತ ಮಾತೆಯ ಮಡಿಲ ಮಕ್ಕಳೆಂದರೆ ನಾವು ನಿಜವಾಗಿಯೂ ಭಾಗ್ಯವಂತರೇ ಸರಿ.

'ಧರ್ಮ' ಈ ಪದದ ನಿಜವಾದ ಅರ್ಥ ನೀತಿ,ನ್ಯಾಯ,ಮಾನವೀಯತೆ,ಸಂಯಮ. ಆದರೆ ಅತ್ಯಂತ ಬುದ್ಧಿಜೀವಿ,ವಿವೇಚನಾಯುಕ್ತ ಜೀವಿ, ಸೃಷ್ಟಿಗಳಲ್ಲೇ ಶ್ರೇಷ್ಟನಾದ ಮಾನವ ಅದನ್ನು ಹಿಂದೂ,ಮುಸ್ಲಿಂ,ಕ್ರಿಶ್ಚಿಯನ್,ಬ್ರಾಹ್ಮಣ,ಕ್ಷತ್ರಿಯ, ವೈಶ್ಯ, ಶೂದ್ರ ಹಾಗೂ ಮೇಲು–ಕೀಳು ಎಂದೆಲ್ಲಾ ಗುರುತಿಸುತ್ತಾನೆ. ಅಂ–ದು ಭಾರತದಿಂದ ಪಾಕಿಸ್ತಾನ ವಿಭಜನೆಗೊಂಡಾಗ ಶುರುವಾದ ಈ ಭಾರತ–ಪಾಕ್ ಕಿತ್ತಾಟ ಇಂದಿಗೂ ನಡೆಯುತ್ತಲೇ ಇದೆ ಎನ್ನುವುದು ನಂಬಲೇಬೇಕಾದ ಕಹಿ ಸತ್ಯ. ಅದು ದೇಶ–ದೇಶಗಳ ನಡುವಿನ ಮಾತಾದರೆ, ಇನ್ನು ಅದಕ್ಕೂ ಅಪಾಯಕಾ–ರಿಯಾಗಿ ನಮ್ಮ ದೇಶದೊಳಗೆ ಒಂದೇ ತಾಯಿಯ ಮಕ್ಕಳಂತೆ ಇರಬೇಕಾದವರು ಶತ್ರುಗಳಂತೆ ವರ್ತಿಸುವುದು ಪ್ರಸ್ತುತ ಸನ್ನಿವೇಶದಲ್ಲಿ ವಿಷಾದನೀಯ.



ತಮ್ಮ ಧರ್ಮವೇ ಶ್ರೇಷ್ಟ ಎಂದು ಬೇರೆ–ಬೇರೆ ಧರ್ಮದವರು, ತಾ ಮುಂದೆ–ನಾ ಮುಂದೆ, ತಮ್ಮ ಧರ್ಮದ ನೀತಿ ತತ್ವಗಳೇ ಸರಿ ಎಂದು ಪ್ರತಿಪಾದಿಸುತ್ತಾ ತಮ್ಮ ನಡುವೆ ವಿಷಬೀಜ ಬಿತ್ತಿಕೊಂಡು ಗಲಭೆ ಪ್ರಾರಂಭಿಸುತ್ತಾ ಇತರರಿಗೂ ತೊಂದರೆ ನೀಡುತ್ತಾ ತಮ್ಮ ಧರ್ಮದ ಗೌರವವನ್ನು ತಾವೇ ಕುಗ್ಗಿಸಿಕೊಳ್ಳುತ್ತಿರುವುದು ಮೂಢತೆಯ ಭಾವನೆಗೆ ಏನು ಹೇಳಬೇಕೋ ತಿಳಿಯದು."ವಿವಿಧತೆಯಲ್ಲಿ ಏಕತೆ" ಎಂಬುದು ನಮ್ಮ ದೇಶದ ವಿಶೇಷವಾಗಿದೆಯೇ ಹೊರತು ನಮ್ಮ ಜನರ ಮನಸ್ಸಿನ ಸಿಧ್ಧಾಂತದಲ್ಲಿ ಇಲ್ಲ. ಯಾವುದೇ ಧರ್ಮವಾಗಲಿ ಧರ್ಮದ ಪವಿತ್ರ ಗ್ರಂಥವಾಗಲಿ ಮಾತೃಭೂಮಿಯನ್ನು ದ್ವೇಷಿಸು ಇತರ ಧರ್ಮದವರಿಗೆ ತೊಂದರೆ ನೀಡು ಎಂದು ಹೇಳಿಲ್ಲ. ಅದರಲ್ಲಿರುವುದನ್ನು ಬಿಟ್ಟು ಉಳಿದದ್ದೆಲ್ಲವನ್ನೂ ಮಾನವ ಮಾಡುತ್ತಿದ್ದಾನೆ. ಯಾವುದೇ ಪವಿತ್ರ ಧರ್ಮದ ನಿಜವಾದ ಅನುಯಾಯಿಯು ಇತರ ಧರ್ಮವನ್ನು ದ್ವೇಷಿಸಲು ಅಥವಾ ನನ್ನ ಧರ್ಮವೇ ಮೇಲು ಎಂದು ಇತರರನ್ನು ಕೀಳರಿಮೆಯಿಂದ ನೋಡಲು ಸಾಧ್ಯವೇ ಇಲ್ಲ.

ಕೆಲವೊಮ್ಮೆ ನಿನಗೆ ದೇಶ ಮೊದಲೋ? ಧರ್ಮ ಮೊದಲೋ? ಎಂದು ಧರ್ಮಾಂಧನಾದ ಒಬ್ಬ ಹಿಂದೂ ಅಥವಾ ಮುಸ್ಲಿಂ ಅಥವಾ ಕ್ರೈಸ್ತನಿಗೆ ಕೇಳಿದರೆ ನನ್ನ ಧರ್ಮದಿಂದಲೇ ಈ ದೇಶ; ಆದ್ದರಿಂದ ಧರ್ಮವೇ ಮೊದಲು ಎಂಬ ಉತ್ತರವನ್ನು ನೀಡುವುದರಲ್ಲಿ ಆಶ್ಚರ್ಯವೇನಿಲ್ಲ. ಅಂಥವರಲ್ಲಿ ನಿನ್ನ ತಂದೆ ಮೊದಲ ? ತಾಯಿ ಮೊದಲ? ಎಂಬ ಪ್ರಶ್ನೆಯನ್ನು ಕೇಳಿ ಅವರ ಉತ್ತರ ಏನಿರಬಹುದೆಂದು ತಿಳಿಯಬೇಕು. ಏಕೆಂದರೆ ಧರ್ಮ ಮತ್ತು ದೇಶ ನಮ್ಮ ತಂದೆ–ತಾಯಿ ಇದ್ದಂತೆ.ಅವರಿಬ್ಬರಲ್ಲಿ ಯಾರೂ ಹೆಚ್ಚಲ್ಲ, ಯಾರೂ ಕಡಿಮೆಯಲ್ಲ.ಇಬ್ಬರನ್ನೂ ಒಂದೇ ರೀತಿ ಪ್ರೀತಿಸುವ ನಾವು ದೇಶ–ಧರ್ಮದಲ್ಲೇಕೆ ಬೇಧ–ಭಾವ ಮಾಡಬೇಕು? ಅವೆರಡಕ್ಕೂ ಒಂದೇ ತೆರನಾದ ಗೌರವ ನೀಡಿದರೆ ಯಾವುದು ಮೊದಲು ಎಂಬ ಗೊಂದಲ ಇರಲಾರದಲ್ಲವೇ?

ಉತ್ತಮ ಪಾಠ ಕಲಿಯಲು ಸೌಹಾರ್ದಯುತ ಜೀವನ ನಡೆಸಲು ಬೇಕಾದದ್ದು ಧರ್ಮ. ನಮ್ಮ ವ್ಯಕ್ತಿತ್ವದ ಔನ್ನತ್ಯಕ್ಕೆ ಬೇಕಾದದ್ದು ಸಮಾಜ, ಅಂದರೆ ನಮ್ಮ ಮಾತೃಭೂಮಿ. ಧರ್ಮ ಮತ್ತು ದೇಶ ಒಂದೇ ನಾಣ್ಯದ ಎರಡು ಮುಖಗಳು.ಇದನ್ನು ಇಂದಿನ ಯುವಜನತೆ ತಿಳಿದು ನಡೆದರೆ ಎಲ್ಲಾ ಧರ್ಮದವರು ನಮ್ಮ ಭಾರತದಲ್ಲಿ ನೆಮ್ಮದಿಯಿಂದ ಜೀವನ ನಡೆಸಬಹುದು,ನಮ್ಮ ದೇಶವು ಸಮೃದ್ದವಾಗುತ್ತದೆ. ಹಾಗೆಯೇ ನಮ್ಮ ತಾಯಿ ಭಾರತಿಯು ಸಂತೃಪ್ತಿಯನ್ನು ಹೊಂದುತ್ತಾಳೆ.

ನಮ್ಮನ್ನು, ನಮ್ಮ ದೇಶವನ್ನು ಸರ್ವನಾಶ ಮಾಡಬೇಕೆಂದು ಅನುಕ್ಷಣವೂ ಕಾಯುತ್ತಿರುವ ನಮ್ಮ ಶತ್ರುಗಳಿಗೆ ಭಾರತದ ಗಡಿಯಲ್ಲಿರುವವನು ಮಾತ್ರ ಸೈನಿಕ ಅಲ್ಲ. ಭಾರತದ ಪ್ರತಿಯೊಬ್ಬ ಪ್ರಜೆಯೂ ದೇಶವನ್ನು ಕಾಯುವ ಸೈನಿಕನೇ ಎಂದು ಮನದಟ್ಟು ಮಡುವ ಹೊಣೆ ನಮ್ಮ ಮೇಲಿದೆ. ಇದಕ್ಕೆ ನಾವೆಲ್ಲಾ ಒಂದಾಗಬೇಕು. ನಾವು ಒಗ್ಗಟ್ಟಿನಿಂದ ಇದ್ದರೆ ನಮ್ಮನ್ನು ಅಥವಾ ನಮ್ಮ ದೇಶದ ಮಣ್ಣಿನ ಒಂದು ಕಣವನ್ನು ಕಿರುಬೆರಳಿನಿಂದ ಮುಟ್ಟಲೂ ಕೂಡಾ ಯಾರೊಬ್ಬರಿಂದ ಸಾಧ್ಯವಾಗದು.

**■ ಸುಮ.ಎನ್.**

## ಸಂಪಾದಕರಿಗೆ ಪತ್ರ

### ಮಾಧ್ಯಮಗಳು ಜನಪರವಾಗಿರಲಿ

ಪ್ರಸ್ತುತ ದಿನಗಳಲ್ಲಿ ಮಾಧ್ಯಮಗಳು ಕಾರ್ಯನಿರ್ವಹಿಸುತ್ತಿರುವ ರೀತಿ ಸಾರ್ವಜನಿಕರ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುವುದು ಆತಂಕಕಾರಿ ವಿಷಯ. ಉತ್ತಮ ಸುದ್ದಿಗಳ ಜೊತೆಗೆ ಕೆಲವೊಂದು ಪ್ರಮುಖ ಸುದ್ದಿಗಳನ್ನು ರಹಸ್ಯಗಳಂತೆ ನೀಡಿ ಕಳವಳವುಂಟು ಮಾಡುವುದು, ಜಾತಿ, ಧರ್ಮಗಳ ವಿಚಾರಗಳಲ್ಲಿ ಸೌಹಾರ್ದತೆಯನ್ನು ಬೆಸೆಯುವಂತೆ ಮಾಡಬೇಕಾದ ಮಾಧ್ಯಮಗಳು ಒಬ್ಬರಿಗೊಬ್ಬರನ್ನು ಎತ್ತಿಕಟ್ಟುವುದರಲ್ಲಿ ಬ್ಯುಸಿಯಾಗಿವೆ. ಪ್ರಕಟಿಸಲು ಬೇಕಾದಷ್ಟು ಉತ್ತಮ ವಿಚಾರಗಳಿರುವಾಗ ಅನಗತ್ಯ, ಸಣ್ಣ ಪುಟ್ಟ ಸಂಗತಿಗಳನ್ನೇ ದಿನವಿಡೀ ಎಳೆದಾಡುವ ಮಾಧ್ಯಮಗಳು ಸಮಾಜದ ಸ್ವಾಸ್ಥ್ಯದ ಕುರಿತು ಚಿಂತಿಸಬೇಕಾಗಿದೆ. ಮಾಧ್ಯಮಗಳು ಆದಷ್ಟು ಜನಪರವಾಗಿರಬೇಕೇ ಹೊರತು ರಾಜಕೀಯ ಪಕ್ಷಗಳೊಂದಿಗೆ, ಧಾರ್ಮಿಕ ಸಂಘಟನೆಗಳೊಂದಿಗೆ ರಾಜಿ ಮಾಡಿಕೊಂಡು ಅವರ ಆಜ್ಞೆಯಂತೆ ಆಟವಾಡುವ ಪ್ರವೃತ್ತಿಯನ್ನು ಮಾಡಬಾರದು. ಪತ್ರಿಕಾ ಸ್ವಾತಂತ್ರ್ಯದ ಜೊತೆಗೆ ಪತ್ರಿಕಾ ಧರ್ಮದ ಬಗ್ಗೆಯೂ ಎಚ್ಚರವಹಿಸಬೇಕು.

**– ಶರೀಫ್ ಪ್ರಥಮ ಎಂ.ಸಿ.ಜೆ**

### ಕ್ಯಾಂಪಸ್‌ಗೆ ಸಿಸಿ ಕ್ಯಾಮರಾ ಅಳವಡಿಕೆ ಸ್ವಾಗತಾರ್ಹ

ಮಂಗಳೂರು ವಿಶ್ವವಿದ್ಯಾನಿಲಯ ಕ್ಯಾಂಪಸ್‌ನಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವುದಾಗಿ ಘೋಷಿಸಿರುವುದು ವಿದ್ಯಾರ್ಥಿಗಳ ಸುರಕ್ಷತೆಯ ದೆಸೆಯಿಂದ ಸ್ವಾಗತಾರ್ಹ. ವಿ.ವಿ. ಕ್ಯಾಂಪಸ್ ಬಹಳಷ್ಟು ವಿಶಾಲವಾಗಿರುವುದರಿಂದ ಬೇರೆ ಯಾವುದೇ ರೀತಿಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸುವುದು ಅಷ್ಟು ಸುಲಭವಲ್ಲ. ಈಗಾಗಲೇ ಒಂದು ಕೃತ್ಯ ನಡೆದಿರುವುದರಿಂದ ಈ ಹಿನ್ನೆಲೆಯಲ್ಲಿ ಸಿಸಿ ಕ್ಯಾಮೆರಾ ಅಳವಡಿಕೆ ಸ್ವಾಗತಾರ್ಹ ಬೆಳವಣಿಗೆ.

**– ಸುಮಾ.ಎನ್**

## ಪತ್ತನಾಜೆಯ ಬಗ್ಗೆ ಒಂದಿಷ್ಟು ಮಾಹಿತಿ...

ತುಳುನಾಡಿನ ಜಾನಪದ ಸಾಹಿತ್ಯದ ಆಧಾರಗಳಾದ ಪಾರ್ಧನಗಳು ಶೋಭಾನ ಹಾಡುಗಳು, ಬೀಸುಗಲ್ಲಿನ ಹಾಡುಗಳೇ ಮೊದಲಾದವನ್ನು ವಿಶ್ಲೇಷಿಸಿದರೆ ಈ ಮೌಲ್ಯಾಧ–ರಿತ ಮೌಖಿಕ ಸಾಹಿತ್ಯಗಳಿಂದ ನಮ್ಮ ನಾಡಿನ ಜನರ ಸಾಮಾಜಿಕ ಸ್ಥಿತಿಗತಿ ನಡೆನುಡಿ ಸಂಸ್ಕೃತಿ ಮೊದಲಾಗಿ ಅನೇಕ ಆಚರಣೆಗಳು ಬೆಳಕು ಕಾಣುವವು. ಇವುಗಳಲ್ಲಿ ಪತ್ತನಾಜೆಯೂ ಒಂದು.

ತುಳುನಾಡಿನಲ್ಲಿ ಜನರು ಅಷ್ಟಮಿಯನ್ನು ಅನಾದಿಯಿಂದ ನಿಷ್ಠೆ ಮತ್ತು ಶ್ರದ್ಧೆಯಿಂದ ಆಚರಿಸಿಕೊಂಡು ಬಂದಿರುವರು. ಪತ್ತನಾಜೆಗೂ ಕೃಷ್ಣಾಷ್ಟಮಿಗೂ ನಿಕಟ ಸಂಬಂಧವಿರುವುದು ತಿಳಿದು ಬರುತ್ತದೆ. ತುಳುವ ಸಂಪ್ರದಾಯದಲ್ಲಿ ಅಷ್ಟಮಿಯ ದಿನ ಅರ್ಧ ಸೇರು ಅಕ್ಕಿಯನ್ನು ಕಡೆದು "ಅಡ್ಡೆ" ಮಾಡಬೇಕೆಂಬ ಕಡ್ಡಾಯ ಮೊದಲಿನಿಂದಲೂ ಇದೆ.

ಅಷ್ಟಮಿ ಬರುವುದು ಮಳೆಗಾಲದ ಸೋಣ ತಿಂಗಳಲ್ಲಿ, ಹಳ್ಳಿಗರಿಗೆ ಮಳೆಗಾಲ ಬಂದರೆ ಅನ್ನ ದಾ–ರಿದ್ರ್ಯದ ಕಾಲ. ಉಳ್ಳವರ ಮಾತು ಬೇರೆ ಆದರೆ ದುಡಿಣ್ಣುವ ಜನರ ಭವಣೆ ಹೇಳತೀರದು. ಜಡಿ ಮಳೆಯ ಜರ್ಝ–ರಿತ ಜೀವನ, ಮಳೆಗಾಲದ ಮೂರು ತಿಂಗಳು ಸಂಪಾಧಿಸುವ ದಾರಿ ಕಾಣದೇ ಕೂಡಿಟ್ಟ ಧಾನ್ಯ ಮುಗಿದು ಕನ್ಯಾ ತಿಂಗಳಿಗಾಗಿ ಕಾಯುವರು. ಈಗೆ ಉಣ್ಣಲು ತೊಂದರೆಯಾದಾಗ ಉಳ್ಳವರಲ್ಲಿ ಒಂದು ಮುಡಿ ಅಕ್ಕಿ ಸಾಲ ತಂದು ದೀಪಾವಳಿಯ ಸಮಯಕ್ಕೆ ಒಂದು ಮುಡಿಗೆ ಇನ್ನೊಂದು ಮುಡಿ ಅಕ್ಕಿಯನ್ನು ಬಡ್ಡಿ ರೂಪದಲ್ಲಿ ತೆರುವ ಸಾಂಪ್ರದಾಯ ತುಳುನಾಡಿನಲ್ಲಿತ್ತು. ಈ ಕ್ರಮಕ್ಕೆ 'ಪೊಲಿಕ್ ಕಣಪಿನಿ' ಎಂದೇ ಹೇಳುವರು. ಬೆಳೆ ಕಟಾವು ಪ್ರಾರಂಭವಾದರೆ ಎಲ್ಲಾ ಸಮಸ್ಯೆಗಳು ಬಗೆ ಹರಿಯುವವು.

ಜನ ಉಣ್ಣಲಿಕ್ಕಿಲ್ಲದಿದ್ದರೂ ತಮ್ಮ ಧಾರ್ಮಿಕ ನಂಬುಗೆಗಳನ್ನು ಶ್ರದ್ಧೆಯಿಂದ ಅನುಸರಿಸುತ್ತಿದ್ದರು. ಪತ್ತನಾಜೆಯ ಕುರಿತಾದ ಒಂದು ಜನಜನಿತ ನಂಬಿಕೆ ಇಂತಿದೆ.

ಮಳೆಗಾಲದಲ್ಲಿ ಅಷ್ಟಮಿಯ ಸಮಯ ತುಳು ನೆಲದ ಒಬ್ಬ ಬಡಪಾಯಿ ಹೆಂಗಸು. ತನ್ನ ಮನೆಯಲ್ಲಿ ಹಬ್ಬ ಮಾಡಲು ಒಂದು ಹಿಡಿ ಅಕ್ಕಿ ಕಾಳು ಇಲ್ಲದಿರುವುದರಿಂದ ತುಂಬಾ ನೊಂದುಕೊಂಡಳು. ಆದರೂ ಮಕ್ಕಳಿರುವ ಮನೆಯಲ್ಲಿ 'ಅಡ್ಡೆ' ಮಾಡಿ ಹಬ್ಬ ಆಚರಿಸಬೇಕೆಂಬ ಧಾರ್ಮಿಕ ಆಸೆ ಮಾತ್ರ ಅವಳಲ್ಲಿ ವಿಶೇಷವಾಗಿತ್ತು ಆದರಿಂದ ಅವಳು ತನ್ನ 'ಕಡೀರವ' ಮಗನನ್ನು ಹೆರವರಲ್ಲಿ ಅಡವಿಟ್ಟು ಅರ್ಧ ಸೇರು ಅಕ್ಕಿ ಸಾಲ ತಂದು ಹಬ್ಬಮಾಡಿದಳು.

ಆದರೆ ಅರ್ಧ ಸೇರು ಅಕ್ಕಿಗೆ ಒತ್ತೆ ಇರಿಸಿದ ಮಗನನ್ನು ಬಿಡಿಸಿ ತರಬೇಕಲ್ಲ, ಆ ಕಷ್ಟ ಕಾಲದಲ್ಲಿ ಅಷ್ಟಕ್ಕೂ ಅನುಕೂಲವಿಲ್ಲ ಆ ಹೆತ್ತವ ಕೊನೆಗೆ 'ಮಾಯಿ' ತಿಂಗಳಲ್ಲಿ ಹತ್ತುಹೋಗುವ ಸಾಲ ತೀರಿಸಿ ಒತ್ತೆ ಇರಿಸಿದ್ದ ಮಗನನ್ನು ಬಿಡಿಸಿ ತಂದಳಂತೆ. ಇಷ್ಟು ದೀರ್ಘಕಾಲ ಕಂದನನ್ನು ದೂರವಿರಿಸಿದ ಹೆತ್ತೊಡಲ ವೇದನೆ ಎಷ್ಟಿರಬೇಡ? ಅದಕ್ಕಾಗಿ ಪ್ರೀತಿಯ ಕಂದನಿಗೆ 'ಪತ್ತ' ಕಾಯಿಸಿ ಆ ಸಿಹಿ ಕಡುಬನ್ನು ತಿನ್ನಲಿಟ್ಟು ಸತ್ಕ–ರಿಸಿದಳಂತೆ. ಆದುದರಿಂದ ಮಾಯಿ ತಿಂಗಳ ಹತ್ತು ಹೋಗುವ ದಿನ ಪತ್ತ ಕಾಯಿಸಿ ಹಿರಿಯ ಮಕ್ಕಳಿಗೆ ಮೊದಲು ತಿನ್ನಿಸುವ ರೂಡಿ ನಡೆದು ಬಂದಿದೆ.

**■ ಶ್ರೇಯ ಶೆಟ್ಟಿ**

# ಕಲಿಯುಗದ ದ್ರೋಣಾಚಾರ್ಯ ಗೋಪಿಚಂದ್

ಈ ಬಾರಿಯ ರಿಯೋ ಒಲಂಪಿಕ್ಸ್‌ನಲ್ಲಿ ಪಾಲ್ಗೊಂಡು ಬೆಳ್ಳಿ ಪದಕ ವಿಜೇತೆಯಾಗಿ ಹೊರಹೊಮ್ಮಿದ ಭಾರತದ ಬ್ಯಾಡ್ಮಿಂಟನ್ ದ್ರುವತಾರೆ ಪಿ.ವಿ ಸಿಂಧೂ ಅವರ ಹಿಂದಿನ ಪ್ರೇರಕ ಶಕ್ತಿಯೆಂದರೆ ಆಕೆಯ ಕೋಚ್ ಪುಲ್ಲೇಲ ಗೋಪಿಚಂದ್. ಇವರ ಬಗ್ಗೆ ತಿಳಿದಿರಬೇಕಾದ ಅನೇಕ ವಿಚಾರಗಳಿವೆ. ಮೂಲತಃ ಹೈದರಬಾದಿನವರಾದ ಇವರು ದೇಶದ ಪ್ರಮುಖ ಬ್ಯಾಡ್ಮಿಟನ್ ತಾರೆಯಾಗಿದ್ದರು. ಶೈಕ್ಷಣಿಕವಾಗಿ ಮುಂದುವರೆಯುವ ಹಂಬಲ ಅವರಿಗೆ ಇರಲಿಲ್ಲ. ಕ್ರೀಡಾ ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಬೇಕೆಂಬ ಅವರ ಗುರಿಗೆ ಅವರ ತಾಯಿ ಪ್ರೇರಕರಾಗಿದ್ದರು. ಅಲ್ಲದೇ ಅವರ ವಯಸ್ಸಿನ ಇತರ ಹದಿಹರೆಯರಂತೆ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಯನ್ನೂ ಬರೆದು ಅನುತ್ತೀರ್ಣರಾಗಿದ್ದರು. "ನಾನೇನಾದರೂ ಉತ್ತೀರ್ಣನಾಗಿದ್ದರೆ ನನ್ನ ಜೀವನದ ದಿಕ್ಕೇ ಬದಲಾಗುತ್ತಿತ್ತು" ಎನ್ನುತ್ತಾರೆ ಗೋಪಿ ಚಂದ್.



ಡಬಲ್ಸ್ ಮ್ಯಾಚ್ ಆಡುತ್ತಿದ್ದ 1994ರಲ್ಲಿ ಇವರ ಮೊಣಕಾಲಿಗೆ ಗಾಯವಾಗಿ ಅವರು ಸುಮಾರು ಒಂದು ವರ್ಷಗಳ ಕಾಲ ನಡೆದಾಡಲೂ ಸಾಧ್ಯವಾಗದ ಪರಿಸ್ಥಿತಿಯನ್ನು ಎದುರಿಸಿದ್ದರು. ಮುಂದೆ ಚೇತರಿಸಿಕೊಂಡ ಇವರು ತನ್ನ 27 ವಯಸ್ಸಿನಲ್ಲಿ ಆಲ್ ಇಂಗ್ಲೇಡ್ ಚಾಂಪಿಯನ್‌ಶಿಪ್ ಗೆದ್ದಿದ್ದರು. ಬಳಿಕ ತನ್ನ ಸ್ಪರ್ಧೆಯನ್ನು ನಿಲ್ಲಿಸಿದ ಇವರು ಕಿರಿಯ ಆಟಗಾರರಿಗೆ ಏನಾದರೂ ಮಾಡಬೇಕು ಎಂಬ ಹಂಬಲದಿಂದ ಅಕಾಡಮಿಯೊಂದನ್ನು ತೆರೆದರು. ತನ್ನ ಮನೆಯನ್ನೂ ಅಡವಿಟ್ಟು ಈ ಬ್ಯಾಡ್ಮಿಟನ್ ಅಕಾಡಮಿ ತೆರೆದಿರುವುದಾಗಿ ಸಂದರ್ಶನವೊಂದರಲ್ಲಿ ಇವರು ಹೇಳಿಕೊಂಡಿದ್ದರು. ಇವರ ತನ್ನ ಅಕಾಡೆಮಿಯ ಮೂಲಕ ಪಿ.ವಿ ಸಿಂಧೂ ಅಲ್ಲದೇ ಭಾರತದ ಸ್ಟಾರ್ ಶಟ್ಲರ್‌ಗಳಾದ ಸೈನಾ ನೆಹವಾಲ್‌ರಂತಹ ಕ್ರೀಡಾಪಟುಗಳಿಗೆ ಅಪ್ರತಿಮ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ. 2001ರಲ್ಲಿ ವಿಶ್ವಚಾಂಪಿಯನ್ ಕೂಡ ಗೆದ್ದಿದ್ದ ಇವರ ಅಕಾಡೆಮಿ ವಿಶ್ವದರ್ಜೆಯ ಆಟಗಾರರನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

ಇವರ ಅಕಾಡಮಿಯಲ್ಲಿ ಬೆಳಗ್ಗೆ 4:30ಕ್ಕೆ ಪ್ರಾಕ್ಟಿಸ್ ಆರಂಭವಾಗುತ್ತದೆ. ಸೈನಾ ನೆಹ್ವಾಲ್, ಸಿಂಧೂ, ಕಿದಂಬಿ ಶ್ರೀಕಾಂತ್ ಸೇರಿದಂತೆ ಅನೇಕರು ಇವರ ಬಳಿ ತರಬೇತಿ ಪಡೆಯುತ್ತಿದ್ದರು. "ಗೋಪಿಚಂದ್‌ಎಲ್ಲರಿಗಿಂತಲೂ ಮುನ್ನ ಅಂದರೆ ಬೆಳಗ್ಗೆ 4:15ಕ್ಕೆ ಕೋರ್ಟ್‌ಗೆ ಹಾಜರಾಗುತ್ತಾರೆ. ತನ್ನ ಬಳಿ ತರಬೇತಿ ಪಡೆಯುವ ಎಲ್ಲಾ ಕ್ರೀಡಾಪಟುಗಳಿಗೂ ಗೋಪಿಚಂದ್ ಸಮಾನ ಗಮನ ನೀಡುತ್ತಾರೆ" ಎನ್ನುತ್ತಾರೆ ಬ್ಯಾಡ್ಮಿಟನ್ ಪಟು ಪರುವಳ್ಳಿ ಕಶ್ಯಪ್. ಹೈದರಾಬಾದಿನ ಅತ್ಯಂತ ಜನ ನಿಬಿಡ ಪ್ರದೇಶವಾದ ಗಚಿಬಾವ್ಲಿಯಲ್ಲಿ ಇರುವ ಇವರ ಅಕಾಡಮಿ ಅನೇಕ ಪ್ರತಿಭಾವಂತರನ್ನು ಸೃಷ್ಟಿಸಿದೆ. ಸಿಂದೂವಿಗಿಂತ ಮುನ್ನ ಇವರ ಅಕಾಡಮಿಯಲ್ಲಿ ಅತ್ಯುನ್ನತ ಆಟಗಾರ್ತಿಯಾಗಿ ಹೊರಹೊಮ್ಮಿದವರು ಸೈನಾ ನೆಹವಾಲ್. ಆದರೆ 2012ರ ಲಂಡನ್ ಒಲಂಪಿಕ್ಸ್‌ಗೆ ಮೊದಲು ಅವರಿಬ್ಬರೂ ದೂರವಾಗಿದ್ದರು.

ಬೆಳ್ಳಿ ಪದಕ ವಿಜೇತೆ ಸಿಂಧೂ ಸುಮಾರು 30 ಕಿ.ಮೀ. ಕ್ರಮಿಸಿ ಇವರ ಅಕಾಡಮಿಗೆ ಬಂದು ತರಬೇತಿ ಪಡೆಯುತ್ತಿದ್ದರು. ಗೋಪಿಚಂದ್ ತನ್ನ ಅಕಾಡಮಿಯ ಬಗ್ಗೆ ಹೀಗೆ ವಿವರಿಸುತ್ತಾರೆ; "ಕ್ರೀಡಾ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಶಿಸ್ತು ಮತ್ತು ಬದ್ಧತೆ ಅತ್ಯಗತ್ಯ. ಇಲ್ಲಿ ಯಾವುದೇ ಸುಲಭದ ಹಾದಿಯಿಲ್ಲ. ಕಷ್ಟಪಟ್ಟು ತರಬೇತಿ ಪಡೆಯುವುದು ಮುಖ್ಯವಾಗಿರುತ್ತದೆ". ಇವರ ಮಾತಿನಂತೆ ತನ್ನ ಅಕಾಡೆಮಿಯಲ್ಲಿ ತರಬೇತಿ ಪಡೆಯುವವರಿಗೆ ಶಿಸ್ತು ಮತ್ತು ಬದ್ಧತೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಿದ್ದರು. ಇಲ್ಲಿ ತರಬೇತಿ ಪಡೆಯುವವರು ರವಿವಾರ ಹೊರತುಪಡಿಸಿ ಉಳಿದ ಇತರ ದಿನಗಳಲ್ಲಿ ಮೊಬೈಲ್ ಬಳಸುವಂತಿರಲಿಲ್ಲ.

ಇವರ ಅಕಾಡೆಮಿಯಲ್ಲಿ ತರಬೇತಿ ಪಡೆದ ಅನೇಕರು ಅಂತರಾಷ್ಟ್ರೀಯ ಮಟ್ಟದ ಪ್ರತಿಭೆಗಳಾಗಿ ಹೊರಹೊಮ್ಮುತ್ತಿದ್ದಾರೆ. ಇದಕ್ಕೆ ಸಾಕ್ಷಿ ಪಿ.ವಿ ಸಿಂಧೂ. 42ರ ಹರೆಯದ ಇವರ ಹುಮ್ಮಸ್ಸು ಹೀಗೆ ಮುಂದುವರೆಯಲಿ ಇವರ ತರಬೇತಿಯಿಂದ ಇನ್ನಷ್ಟು ಅತ್ಯುನ್ನತ ಭಾರತೀಯ ಬ್ಯಾಡ್ಮಿಟಂನ್‌ಪಟುಗಳು ಹೊರಹೊಮ್ಮಲಿ ಎಂಬುವುದೇ ನಮ್ಮ ಆಶಯ.

**■ ಇರ್ಫಾನ್ ನೆಕ್ಕಿಲಾಡಿ**

# ಜಿಯೋ–ಡಿಜಿಟಲ್ ಡಾಟಾಗಿರಿಗೆ ನಾಂದಿ

**ದೇಶದಲ್ಲಿ** ಈಗ ಜಿಯೋ ನೆಟ್‌ವರ್ಕ್‌ನದ್ದೇ ಸದ್ದು. ದೇಶದ ಅತ್ಯಂತ ಶ್ರೀಮಂತ ಉದ್ಯಮಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಅನಿಲ್ ಅಂಬಾನಿ ಇತ್ತೀಚೆಗೆ ಮುಂಬೈನಲ್ಲಿ ನಡೆದ ಷೇರುದಾರರ ಸಭೆಯಲ್ಲಿ ಜಿಯೋ ಸಿಮ್ ಮಾರುಕಟ್ಟೆಗೆ ತರುವ ಬಗ್ಗೆ ಅಧಿಕೃತವಾಗಿ ತಿಳಿಸಿದ್ದಾರೆ. ಇದನ್ನು ಈ ಹಿಂದಿನ ಗಾಂಧಿಗಿರಿಯಂತೆ ಈಗ ಡಾಟಾಗಿರಿ ಎಂದು ಕರೆಯಲಾರಂಭಿಸಿದ್ದಾರೆ. ಈ ಹೇಳಿಕೆ ಇಷ್ಟು ವರ್ಷ ದೇಶದಲ್ಲಿ ಅಂತರ್ಜಾಲ ಸಂಪರ್ಕ ಹೊಂದಿರುವ ಘಟಾನುಘಟಿ ಕಂಪೆನಿಗಳಾದ ಏರ್‌ಟೆಲ್, ಐಡಿಯಾ ಮತ್ತಿತರ ಕಂಪೆನಿಗಳಿಗೆ ನಡುಕ ಹುಟ್ಟಿಸಿದೆ ಎನ್ನಬಹುದು. ಈ ಸೇವೆಯು

**ಜಿಯೋ ಪ್ರಮುಖ ಅಂಶಗಳು**

- ವಿಶ್ವದಲ್ಲೇ ಅತ್ಯಂತ ಕಡಿಮೆ ದರದ ಡಾಟಾ ಸೇವೆ
- ಆಧಾರ್ ಕಾರ್ಡ್ ತಂದವರಿಗೆ ಜಿಯೋ ಸಿಮ್ 15 ನಿಮಿಷಕ್ಕೆ ಆ್ಯಕ್ಟಿವೇಟ್
- ಜೀವನಪೂರ್ತಿ ಉಚಿತ ಧ್ವನಿ ಕರೆ
- ರೋಮಿಂಗ್ ದರ ಇಲ್ಲ
- ವಿದ್ಯಾರ್ಥಿಗಳಿಗೆ 25% ಹೆಚ್ಚುವರಿ ಡಾಟಾ
- ಜಗತ್ತಿನ ಅತೀ ದೊಡ್ಡ 4ಜಿ ನೆಟ್‌ವರ್ಕ್
- ಹೆಚ್ಚು ಬಳಸಿದರೆ ಕಡಿಮೆ ಹಣ
- ಯಾವುದೇ ನೆಟ್‌ವರ್ಕ್‌ಗೆ ಉಚಿತ ಕರೆ
- ಡೇಟಾಕ್ಕೆ ಮಾತ್ರ ಶುಲ್ಕ

ಇದೇ ಸೆಪ್ಟೆಂಬರ್ 5ರಿಂದ ಜಾರಿಗೆ ಬಂದಿದೆ. ಗ್ರಾಹಕರನ್ನು ಆಕರ್ಷಿಸುವ ಉದ್ದೇಶದಿಂದ ಈ ವರ್ಷಾಂತ್ಯದವರೆಗೆ ಜಿಯೋ ನೆಟ್‌ವರ್ಕ್‌ನಲ್ಲಿ ಉಚಿತ ಡಾಟಾ, ಎಸ್‌ಎಮ್‌ಎಸ್, ಧ್ವನಿ ಕರೆಯು ಉಚಿತವಾಗಿರಲಿದೆ ಎಂದು ಅಂಬಾನಿ ಘೋಷಿಸಿದ್ದಾರೆ. ತದನಂತರ ಡೇಟಾ ದರಗಳಿಗೆ ಸಂಬಂಧಿಸಿದಂತೆ ಸುಮಾರು 10 ಪ್ಲಾನ್‌ಗಳು ಜಾರಿಗೆ ಬರಲಿವೆ. ಜೊತೆಗೆ ಈಗ ಇರುವ ದರಕ್ಕಿಂತ ಕಡಿಮೆ ದರದಲ್ಲಿ ಜಿಯೋ ನೆಟ್‌ವರ್ಕ್ ತನ್ನ ಡಾಟಾ ಪ್ಲ್ಯಾನ್ ಒದಗಿಸಲಿದೆ ಎಂದು ತಿಳಿಸಿದ್ದಾರೆ. ಈ ವೇಳೆ 45 ನಿಮಿಷಗಳ ಭಾಷಣ ಮಾಡಿದ ಅಂಬಾನಿ ವಿಶ್ವದಲ್ಲೇ ಅತ್ಯಂತ ಕಡಿಮೆ ದರದಲ್ಲಿ ಇಂಟರ್‌ನೆಟ್ ಸೇವೆ ನೀಡುವ ಗುರಿ ನಮ್ಮದು ಎಂದು ಹೇಳಿದ್ದಾರೆ.

ಈ ಘೋಷಣೆಯಿಂದ ಆಘಾತಗೊಂಡಿರುವ ಭಾರ್ತೀ ಏರ್‌ಟೆಲ್ ಕಂಪೆನಿ ಜಿಯೋಗೆ ಸರಿ ಸಮಾನವಾಗಿ ಗುದ್ದಾಡುವ ಸಲುವಾಗಿ ತನ್ನ ಮಾಸಿಕ ಪ್ಲ್ಯಾನ್‌ಗಳ ದರ ಕಡಿಮೆ ಮಾಡುವುದಾಗಿ ಘೋಷಿಸಿಕೊಂಡಿದೆ. ವಿಶೇಷ ಎಂದರೆ ಒಂದು ಕಡೆ ಅಸ್ಥಿತ್ವದಲ್ಲಿರುವ ಬೃಹತ್ ನೆಟ್‌ವರ್ಕ್ ಇನ್ನೊಂದು ಕಡೆ ಈಗಷ್ಟೇ ಅಂಬೆಗಾಲಿಡುತ್ತಿರುವ ಕಂಪೆನಿ ಜೊತೆಗೆ ಹಣ ಮತ್ತು ಅಧಿಕಾರದ ಬಲ ಹೊಂದಿರುವ ಈ ಕಂಪೆನಿ. ಇವೆರಡರ ಮಧ್ಯೆ ಯಾರು ಗೆಲ್ಲುತ್ತಾರೆ? ಯಾರು ಸೋಲುತ್ತಾರೆ? ಎಂಬುವುದನ್ನು ಕಾದು ನೋಡಬೇಕು.

ಒಂದು ಅಂದಾಜಿನ ಪ್ರಕಾರ ದೇಶದ ಸುಮಾರು ಶೇ 40.00ರಷ್ಟು ಜನ ಈಗಾಗಲೇ ಏರ್‌ಟೆಲ್ ನೆಟ್‌ವರ್ಕನ್ನು ನೆಚ್ಚಿಕೊಂಡಿದ್ದಾರೆ. ಹಾಗೂ ಏರ್‌ಟೆಲ್ ಕೇವಲ ಭಾರತವಷ್ಟೆ ಅಲ್ಲದೆ ವಿಶ್ವದ ಸುಮಾರು 20 ದೇಶಗಳಲ್ಲಿ ತನ್ನ ಸೇವೆಯನ್ನು ಒದಗಿಸುತ್ತಿದೆ. ಇನ್ನು ಆಫ್ರಿಕಾದ 17 ದೇಶಗಳಲ್ಲಿ ಮತ್ತು ನಮ್ಮ ದೇಶದ ನೆರೆಯ ರಾಷ್ಟ್ರಗಳಾದ ಬಾಂಗ್ಲಾದೇಶ, ಶ್ರೀಲಂಕಾಗಳಲ್ಲಿ ಅತ್ಯಂತ ಹೆಚ್ಚು ಗ್ರಾಹಕರನ್ನು ಹೊಂದಿದೆ. ಸುಮಾರು 20 ವರ್ಷಗಳಿಂದ ಈ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಈ ಕಂಪೆನಿಯು ಈ ಆಘಾತವನ್ನು ಹೇಗೆ ಎದುರಿಸುತ್ತದೆ ಎಂಬುವುದನ್ನು ಕಾದುನೋಡಬೇಕು.

ಇನ್ನು ಜಿಯೋ ನೆಟ್‌ವರ್ಕ್ ವಿಷಯಕ್ಕೆ ಬಂದರೆ ದೇಶದ ವಿವಿಧ ಕ್ಷೇತ್ರಗಳಾದ ಮನರಂಜನೆ, ಸುದ್ದಿ, ಅನಿಲ, ಪೆಟ್ರೋಕೆಮಿಕ್ಸ್, ತೈಲ, ವಾಣಿಜ್ಯ ಮುಂತಾದ ಕ್ಷೇತ್ರಗಳಲ್ಲಿ ಹಣ ಹೂಡಿ ಸೈ ಅನಿಸಿಕೊಂಡಿರುವ ಉದ್ಯಮಿ ಈಗ ಈ ಮೊಬೈಲ್ ನೆಟ್‌ವರ್ಕ್ ಕ್ಷೇತ್ರಕ್ಕೆ ಕಾಲಿಟ್ಟಿದ್ದಾರೆ. ಇದು ಏರ್‌ಟೆಲ್, ಐಡಿಯಾ, ವಡಾಫೋನ್ ಕಂಪೆನಿಗಳಿಗೆ ನುಂಗಲಾರದ ತುತ್ತಾಗಿದೆ. ಇದರ ಮಧ್ಯೆ ಐಡಿಯಾ ಹಾಗೂ ವಡಾಫೋನ್ ಕಂಪೆನಿಗಳು ವಿಲೀನಗೊಂಡು ಜಿಯೋಗೆ ಸೆಡ್ಡುಹೊಡೆಯಲು ನಿರ್ಧರಿಸಿದ್ದಾರೆ ಎಂಬ ಸುದ್ದಿ ಪತ್ರಿಕೆಗಳಲ್ಲಿ ಹರಿದಾಡುತ್ತಿದೆ.

ಇದೆಲ್ಲಾ ದರ ಸಮರದ ಕತೆಯಾದರೆ ತಂತ್ರಜ್ಞಾನಕ್ಕೆ ಬಂದರೆ ಏರ್‌ಟೆಲ್ ಗಟ್ಟಿಯಾಗಿದೆ. ಯಾವುದೇ ಮೊಬೈಲ್ ಕಂಪೆನಿ ಜನರಿಗೆ ಸೇವೆ ನಿಡಲು ಟವರ್‌ನಲ್ಲಿರುವ ಬಿಟಿಎಸ್ (ಬೇಸ್ ಟ್ರಾನ್ಸಿವರ್ ಸ್ಟೇಷನ್) ಎಂಬ ತಂತ್ರಜ್ಞಾನವನ್ನು ಹಾದುಹೋಗಬೇಕು. ಸದ್ಯ ಭಾರತದಲ್ಲಿ ಎರಿಕ್ಸನ್, ಹುವಾಯಿ ಎಂಬ ಕಂಪೆನಿಗಳು ಈ ಸೇವೆಯನ್ನು ನೀಡುತ್ತಿವೆ. ಆದರೆ ರಿಲಾಯನ್ಸ್ ಕಂಪೆನಿಯು ಈ ತಂತ್ರಜ್ಞಾನಕ್ಕಾಗಿ ಸ್ಯಾಮ್‌ಸಂಗ್ ಕಂಪೆನಿ ಜೊತೆ ಒಪ್ಪಂದ ಮಾಡಿಕೊಂಡಿದೆ ಎಂದು ಫಸ್ಟ್‌ಪೋಸ್ಟ್ ವೆಬ್‌ಸೈಟ್ ತಿಳಿಸಿದೆ. ಈ ಬಿಟಿಎಸ್ ಎಂಬ ಸಂಪರ್ಕ ಕ್ಷೇತ್ರಕ್ಕೆ ಹೊಸತು.

ಒಟ್ಟನಲ್ಲಿ ಹೇಳುವುದಾದರೆ ಜಿಯೋ ಕಂಪೆನಿಯು ಹೊಸ ಗ್ರಾಹಕರನ್ನು ತನ್ನೆಡೆಗೆ ಸೆಳೆಯುವ ಪ್ರಯತ್ನ ಮಾಡಿದೆ. ಇದರ ಮಧ್ಯೆ ಏರ್‌ಟೆಲ್, ಐಡಿಯಾ ಮತ್ತಿತರ ಕಂಪೆನಿಗಳು ದರ ವಿಷಯದಲ್ಲಿ ಟ್ರಾಯ್ (ದೂರ ಸಂಪರ್ಕ ನಿಯಂತ್ರಣ ಪ್ರಾಧಿಕಾರ) ಮೊರೆ ಹೋಗಿದೆ. ಇಷ್ಟೆಲ್ಲಾ ವಿಘ್ನಗಳು ಮಧ್ಯೆ ಅಂಬಾನಿ ಒಡೆತನದ ಜಿಯೋ ಹೇಗೆ ಎದ್ದು ನಿಲ್ಲುತ್ತದೆ ಎಂಬ ಪ್ರಶ್ನೆ ಎಲ್ಲರಲ್ಲಿ ಕಾಡಿದೆ.

**■ ರಾಜೇಶ್ ಫೆರಾವೋ**

## ಕಾರ್ಟೂನ್ ಕಾರ್ನರ್




## ನಾಡಹಬ್ಬ ಮೈಸೂರು ದಸರಾ ಲಾಂಛನ, ವೆಬ್ ಸೈಟ್ ಅನಾವರಣ

ಮೈಸೂರು ದಸರಾ 2016

ಅಕ್ಟೋಬರ್ ತಿಂಗಳು ಬಂತು ಎಂದರೆ ಕರ್ನಾಟಕದ ಜನತೆಗೆ ನೆನಪು ಆಗುವುದು ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ, ಈ ಬಾರಿಯ ದಸರಾ ಆಚರಣೆಯ ಚಟುವಟಿಕೆಗಳು ದಸರಾ ಉನ್ನತ ಮಟ್ಟದ ಸಮಿತಿ ಸಭೆಯ ಮೂಲಕ ಆರಂಭವಾಗಿದ್ದು, ಅದರಂತೆ ವಿಶೇಷವಾಗಿ ಇದೇ ಮೊದಲ ಬಾರಿ ದಸರಾ ಲಾಂಛನ ಮತ್ತು ವೆಬ್ ಸೈಟ್ ಅನಾವರಣಗೊಳಿಸಲಾಗಿದೆ. ಈ ಬಾರಿಯ ನಾಡಹಬ್ಬ ಮೈಸೂರು ದಸರಾ ಲಾಂಛನವನ್ನು ಸಾರ್ವಜನಿಕರು ಹಾಗೂ ಕಲಾವಿದರಿಂದ ಸ್ಪರ್ಧೆ ನಡೆಸಿ, ಉತ್ತಮ ಲಾಂಛನ ಮಾದರಿಯನ್ನು ಆಯ್ಕೆ ಮಾಡಲು ಉದ್ದೇಶಿಸಲಾಗಿತ್ತು. ಅದರಂತೆ ರಾಜ್ಯದ ವಿವಿಧ ಭಾಗದಿಂದ ಒಟ್ಟು 83 ಜನರು ಭಾಗವಹಿಸಿದ್ದರು. ಸುಮಾರು 160 ಲಾಂಛನವನ್ನು ಸ್ವೀಕರಿಸಲಾಗಿತ್ತು. ಅದರಂತೆ 10 ಲಾಂಛನಗಳನ್ನು ಆಯ್ಕೆ ಮಾಡಲಾಗಿತ್ತು. ಅದರಲ್ಲಿ ಲೋಕೇಶ್ ರಾವುದಿ, ಆದಿ ಕ್ರಿಯೆಟಿವ್ಸ್, ಬೆಂಗಳೂರು ಇವರು ತಯಾರಿಸಿರುವ ಲಾಂಛನವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಅಂತಿಮವಾಗಿ ಆಯ್ಕೆ ಮಾಡಲಾಗಿದೆ. ಅದರಂತೆ ವಿಶೇಷ ಲಾಂಛನವೊಂದು ಈ ಬಾರಿಯ ದಸರಾ ಹಬ್ಬಕ್ಕೆ ಇನ್ನಷ್ಟು ಮೆರುಗು ನೀಡಿದ್ದು, ದಸರಾ ತಯಾರಿ ಹಾಗೂ ಬಳಿಕ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳ ಮತ್ತು ಅದ್ದೂರಿಯಾಗಿ ನಡೆಯುವ ಜಂಬೂ ಸವಾರಿ ಹಾಗೂ ಇನ್ನಿತರ ದಸರಾ ಸಂಬಂಧಿ ಕಾರ್ಯಕ್ರಮಗಳ ಸಂಪೂರ್ಣ ಮಾಹಿತಿಯನ್ನು ಈ ಬಾರಿ ಅನಾವರಣಗೊಂಡ ವೆಬ್ ಸೈಟ್‌ನಲ್ಲಿ ದೊರಕುವಂತೆ ಮಾಡಲಾಗಿದೆ.

**■ ಅಹ್ಮದ್ ಬಾವ**

# ‘ದಿ ಅಲ್ಕೆಮಿಸ್ಟ್’ನ ಕನ್ನಡ ಅನುವಾದ ರಸವಾದಿ

‘ರಸವಾದಿ’, ಪೋರ್ಚುಗೀಸ್ ಲೇಖಕ ಪಾವ್ಲೋ ಕೊಯ್ಲೋ ಅವರ ಸುಪ್ರಸಿದ್ಧ ಕಾದಂಬರಿ ‘ದಿ ಅಲ್ಕೆಮಿಸ್ಟ್’ ನ ಕನ್ನಡ ಅನುವಾದ. ಕನ್ನಡದ ಲೇಖಕ ಅಬ್ದುಲ್ ರಹೀಮ್ ಟೀಕೆಯವರು ಈ ಅನುವಾದವನ್ನು ಬಹಳ ಸುಂದರವಾಗಿ, ಸರಳ ಭಾಷಾ ಶೈಲಿಯಲ್ಲಿ ಅಚ್ಚುಕಟ್ಟಾಗಿ ಮಾಡಿದ್ದಾರೆ.

ಸ್ಪೇನ್‌ನ ಅಂಡಾಲೂಸಿಯಾದ ಸಾಂಟಿಯಾಗೋ ಎಂಬ ಕುರುಬ ಹುಡುಗನೊಬ್ಬನ ಬದುಕಿನ ರೋಚಕ ಕತೆಯನ್ನು ಲೇಖಕ ಪ್ರತಿಯೊಬ್ಬರ ಬದುಕಿಗೆ ಪ್ರೇರಣೆಯಾಗುವಂತೆ ಕಟ್ಟಿಕೊಟ್ಟಿದ್ದಾರೆ. ತಾನು ಕಂಡ ಕನಸನ್ನು ಸಾಧಿಸುವ ಸಲುವಾಗಿ ಪಾದ್ರಿಯಾಗಬೇಕೆಂಬ ಹೆತ್ತವರ ಬಯಕೆಯನ್ನು ಬದಿಗಿಟ್ಟು ಕುರುಬನಾಗಿ ಬದುಕು ಆರಂಭಿಸುವುದರಿಂದ ಹಿಡಿದು, ರಸವಾದಿಯನ್ನು ಭೇಟಿಯಾಗುವವರೆಗೆ ಇಲ್ಲಿ ಬರುವ ಎಲ್ಲಾ ಪಾತ್ರಗಳೂ ಬದುಕಿನ ಕುರಿತು ಸುಂದರವಾಗಿ ಮಾತನಾಡುತ್ತದೆ. ಕೆಲವೊಂದು ಮೌಲ್ಯಯುತ ಮಾತುಗಳನ್ನು ಮನಸ್ಸಿನಲ್ಲಿ ಅಚ್ಚೊತ್ತಿ ಉಳಿಯುವಂತೆ ಮತ್ತೆ ಮತ್ತೆ ಬಳಸಿದ್ದಾರೆ. ಓದುತ್ತಾ ಹೋದಂತೆ ಅಂತಹ ವಾಕ್ಯಗಳು ಬದುಕಿಗೆ ತೀರಾ ಹತ್ತಿರವಾಗಿ ಬಿಡುತ್ತದೆ. ಈ ರೀತಿ ಬದುಕು ಬದಲಾಯಿಸುವಂತಹ ಕತೆಗಳನ್ನು ಸಮಾಜಕ್ಕೆ ನೀಡುವುದೆಂದರೆ ಅದು ಲೇಖಕರು ಆತ್ಮಾರ್ಥವಾಗಿ ಸಲ್ಲಿಸುವ ಸೇವೆ. “ನೀನೇನಾದರೂ ಆತ್ಮಾರ್ಥವಾಗಿ ಬಯಸಿದರೆ ಅದನ್ನು ಸಾಧಿಸಿಕೊಡಲು ಇಡೀ ಬ್ರಹ್ಮಾಂಡವೇ ನಿನ್ನ ಜೊತೆ ಸಂಚು ಹೂಡಿ ಸಹಕರಿಸುತ್ತದೆ.”, “ಬದುಕಲ್ಲಿ ಏಳುಬೀಳುಗಳನ್ನು ಸಮಾನವಾಗಿ ಸ್ವೀಕ–ರಿಸು ಏಕೆಂದರೆ, ಏಳುಬೀಳುಗಳು ಶಾಪವಲ್ಲ, ವರ.” ಮತ್ತು “ ನಿನ್ನ ಹೃದಯವೆಲ್ಲಿದೆಯೋ ಅಲ್ಲೇ ನಿನ್ನ ಸಂಪತ್ತು ಕೂಡಾ ಇರುತ್ತದೆ.” ಇಂಥಹ ಸಾಲುಗಳು ಬದುಕಿನ ಬಗ್ಗೆ ಭರವಸೆಯನ್ನು ಗಟ್ಟಿಗೊಳಿಸುತ್ತವೆ






## ಪುಸ್ತಕ ವಿಮರ್ಶೆ

**ಪುಸ್ತಕದ ಹೆಸರು: ರಸವಾದಿ**
**ಲೇಖಕರು :ಅಬ್ದುಲ್‌ರಹೀಮ್ ಟೀಕೆ**
**ಪುಟಗಳು : 170**
**ಪ್ರಕಾಶನ :ಸಲ್ಮಾ ಬಾವಾಫೌಂಡೇಶನ್**
**ಬೆಲೆ : 250 ರೂ.**

ವೈಯಕ್ತಿಕ ಮಹತ್ವಾಕಾಂಕ್ಷೆಯನ್ನು ಸಾಧಿಸಲು ಹೊರಟ ಹುಡುಗ ಸಂಪತ್ತನ್ನು ಹುಡುಕುತ್ತಲೇ ಕಥೆ ಸಾಗುತ್ತದೆ. ಆ ನಡುವೆ ಆತನ ಅನುಭವಗಳು ತನ್ನ ಸಾಧನೆಗೆ ಹೇಗೆ ಪೂರಕವಾಗುತ್ತದೆ ಎಂಬುವುದು “ಇಡೀ ಬ್ರಹ್ಮಾಂಡವೇ ನಿನ್ನ ಜೊತೆ ಸಂಚು ಹೂಡಿ ಸಹಕರಿಸುತ್ತದೆ” ಎಂಬ ವಾಸ್ತವ ಸತ್ಯವನ್ನು ನೆನಪಿಗೆ ತರುತ್ತದೆ. ಗುಪ್ತ ಸಂಪತ್ತನ್ನು ಹುಡುಕುವುದಕ್ಕೆಂದು ಹುಡುಗ ಮಾಡುವ ಹಲವು ರೀತಿಯ ಪ್ರಯತ್ನಗಳು, ತೆಗೆದುಕೊಳ್ಳುವ ನಿರ್ಧಾರಗಳು ಮತ್ತು ಅವುಗಳಿಂದಾಗಿ ಆತ ತಿಳಿದುಕೊಳ್ಳುವ ವಿಶ್ವಭಾಷೆ, ವಿಶ್ವಾತ್ಮದಂತಹ ಪರಿಕಲ್ಪನೆಗಳು ಅತಿವಿಶಾಲ ಲೋಕದ ಸಾಮಾನ್ಯ ಸತ್ಯವನ್ನು ಈ ಕತೆ ಸದ್ದಿಲ್ಲದೇ ತಿಳಿಸುತ್ತಾ ಹೋಗುತ್ತದೆ. ಇಲ್ಲಿ ಬದುಕಿಗೆ ಬೇಕಾದ ಅಮೂಲ್ಯ ಪಾಠಗಳಿವೆ.ಈ ಕತೆಯಲ್ಲಿ ಬದುಕಿನ ದಿನಗಳ ಸಾಮಾನ್ಯ ವಿಚಾರಗಳನ್ನು ವರ್ಣಿಸಿದ ರೀತಿ ಇಷ್ಟವಾಗುತ್ತದೆ. ತುಪ್ಪಟ ವ್ಯಾಪಾ–ರಿಯ ಮಗಳ ಮೇಲೆ ಪ್ರೀತಿ ಹುಟ್ಟಿ ಮತ್ತೆ ಅವಳು ಸಿಗಲಾರಳೆಂದು ಹುಡುಗನಿಗೇ ಅನ್ನಿಸಿಕೊಂಡು ಅದರ ಗೋಜಿಗೆ ಹೋಗದಿರುವುದು, ಯಾರೋ ಬರೆದ ಪುಸ್ತಕದ ಕತೆಗಳನ್ನು ಓದಿ ನೆನಪಿಟ್ಟುಕೊಂಡು ಓದು ಬರಹ ಗೊತ್ತಿಲ್ಲದ ಅವಳ ಮುಂದೆ ತಾನು ರಚಿಸಿದ್ದೆಂದು ಸುಳ್ಳು ಹೇಳಿ ಅವಳನ್ನು ಅಚ್ಚರಿಗೊಳಿಸಬೇಕೆಂಬ ಅವನ ಯೋಚನೆ, ಅವಳ ಮೇಲಿನ ಅವನ ಪ್ರೀತಿಯ ಕುರಿತು ಕುತೂಹಲ ಸೃಷ್ಟಿಸುತ್ತದೆ. ಇವನ್ನೆಲ್ಲಾ ಬಿಡಿ ಬಿಡಿಯಾಗಿ ಹೇಳುವ ಲೇಖಕರು, ಹುಡುಗನ ಮನಸ್ಸಿನ ಬಾಗಿಲು ಮುರಿದು ಕನಸುಗಳನ್ನು ಹೊರಗೆಡಹಿ ಪರೀಕ್ಷಿಸಿ ವಿವ–ರಿಸಿದಂತಿದೆ.

ಕುರಿಗಳು ಮತ್ತು ಪುಸ್ತಕಗಳ ಜೊತೆಗೆ ಉತ್ತಮ ನಂಟು ಬೆಳೆಸಿದ್ದು, ಕುರಿಗಳ ಬದುಕನ್ನು ಆತ ಅರ್ಥಮಾಡಿಕೊಂಡಂತೆ ಕುರಿಗಳೂ ಅವನ ಕುರಿತು ಅರ್ಥ ಮಾಡಿಕೊಂಡಿವೆಯೆಂಬಂತೆ ಅವನಿಗೆ ಭಾಸವಾಗುತ್ತದೆ. ಪುಸ್ತಕಗಳನ್ನು ಓದುತ್ತಾ ಬದುಕಿನ ನೀರವತೆಯನ್ನು ಇಲ್ಲವಾಗಿಸುವ ಪ್ರಯತ್ನ, ಒಂದು ಹೊಸ ಹವ್ಯಾಸವನ್ನು, ಮನುಷ್ಯರನ್ನು ಹೊರತುಪಡಿಸಿ ಪ್ರಕೃತಿಯ ಬೇರೊಂದು ಜೀವಗಳ ಅಥವಾ ವಸ್ತುಗಳ ಜೊತೆ ಸ್ನೇಹ ಬೆಳೆಸಬೇಕೆಂಬ ಹಂಬಲವನ್ನು ಹುಟ್ಟಿಸುತ್ತದೆ. ವೈಯಕ್ತಿಕ ಮಹಾತ್ವಾಕಾಂಕ್ಷೆಯನ್ನು ಸಾಧಿಸಲು ಕೆಲವೇ ಕೆಲವು ಸವಾಲುಗಳಿರುವಾಗ ಕತೆಯ ಕು–ರಿತು ಕುತೂಹಲ ಹೆಚ್ಚುತ್ತದೆ. (ಈ ಸಂದರ್ಭ ತೇಜಸ್ವಿಯವರ ‘ಕರ್ವಾಲೊ’ ಕಾದಂಬರಿಯ ಕೊನೆಯ ರೋಚಕ ಕ್ಷಣಗಳನ್ನು ನೆನಪಿಸಿದ್ದು ಸುಳ್ಳಲ್ಲ.) ಜೊತೆಗೆ ಮುಂದಿನ ಒಂದೊಂದು ಕ್ಷಣವೂ ರೋಚಕವೆನಿಸುತ್ತದೆ. ಹುಡುಗ, ಒಮ್ಮೆ ಬಿದ್ದಂತೆ ಮತ್ತೆ ಎದ್ದಂತೆ ಹೀಗೆ ಪ್ರಯತ್ನಗಳ ನಡುವೆ ಪ್ರಯತ್ನ ನಡೆಸುವ ಪರಿ ಕುತೂಹಲ, ರೋಚಕತೆಯ ನಡುವೆಯೂ ಮನಸ್ಸಿನಲ್ಲಿ ಒಂದು ಗಂಭೀರ ಭಾವ ಹುಟ್ಟಿಸುತ್ತದೆ. ತಾನು ಹುಡುಕಿ ಬಂದ ಸಂಪತ್ತು ತಾನಿದ್ದಲ್ಲೇ ಇತ್ತು ಎಂಬ ಸತ್ಯ ಗೊತ್ತಾದಾಗ, ಒಬ್ಬ ಸೋಮಾರಿಯ ಮುಂದೆ ಸಂಪತ್ತನ್ನು ಗೆದ್ದು ನಿಂತ ಅತೀವ ಸಂತಸದ ಆ ಕ್ಷಣ ಇಡೀ ಕತೆಯ ಸಾರವನ್ನು, ಅದರ ನೀತಿಯನ್ನು ಅರ್ಥವತ್ತಾಗಿ ತಿಳಿಸುವುದಕ್ಕೆ ಶಕ್ತವಾಗಿದೆ.

ಹುಡುಗ ಪ್ರೀತಿಸುವ ಹೆಣ್ಣು, ಫಾತಿಮಾಳ ಪಾತ್ರ ‘ಮರುಭೂಮಿಯ ಹೆಣ್ಣು’ಗಳ ಕಥೆಯನ್ನು ಹೇಳುತ್ತದೆ.

ಒಟ್ಟಿನಲ್ಲಿ ‘ರಸವಾದಿ’ ಅತ್ಯುತ್ತಮ ಕಾದಂಬರಿ ಎನ್ನುವುದರಲ್ಲಿ ಸಂಶಯವಿಲ್ಲ. ಒಬ್ಬ ಅನುವಾದಕನ ಮುಂದಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ಮತ್ತು ಆ ಮೂಲಕ ಕೃತಿಯನ್ನು ಚಂದಗಾಣಿಸುವಲ್ಲಿ ‘ಟೀಕೆ’ಯವರು ಯಶಸ್ವಿಯಾಗಿದ್ದಾರೆ. ಜಗತ್ತು ಓದಿದ ‘ದಿ ಅಲ್ಕೆಮಿಸ್ಟ್’ನ್ನು ಕನ್ನಡದ ಮನಸ್ಸುಗಳು ತಮ್ಮ ಭಾಷೆಯಲ್ಲಿ ಓದುವಂತಾಗಲು ಅನುವಾದಕರು ನಡೆಸಿದ ಈ ಪ್ರಾಮಾಣಿಕ, ಸದುದ್ದೇಶದ ಪ್ರಯತ್ನಕ್ಕೆ ಕೃತಜ್ಞ.

**■ ಮಹಮ್ಮದ್ ಶರೀಫ್ ಕಾಡುಮಠ**

# ಐರನ್ ಲೇಡಿಯ ಉಪವಾಸ ಅಂತ್ಯ: ಚುನಾವಣಾ ಅಖಾಡಕ್ಕೆ

ಸಶಸ್ತ್ರ ಪಡೆಗಳ ವಿಶೇಷ ಅಧಿಕಾರವನ್ನು ಹಿಂಪಡೆಯಬೇಕು ಎಂಬ ಕಾರಣ–ಕ್ಕೆ ಬರೋಬ್ಬರಿ 16 ವರ್ಷಗಳಿಂದ ನಡೆಸುತ್ತಿರುವ ಅಮರಣಾಂತ ಉಪವಾಸಕ್ಕೆ ಕೊನೆ ಹಾಡಿದ್ದಾರೆ. ಈ ದಿಟ್ಟ ನಿರ್ಧಾರವನ್ನು ಕೈಗೊಂಡಿರುವುದು ಮಣಿಪುರದ ಐರನ್ ಲೇಡಿ ಎಂದೇ ಹೆಸರುವಾಸಿಯಾದ ಇರೋಮ್ ಶರ್ಮಿಳಾ. ಇದು ಮಣಿಪುರ ಹಾಗೂ ಇಡೀ ದೇಶದಲ್ಲಿ ಹೊಸ ಅಲೆಯನ್ನು ಸೃಷ್ಟಿಸಿದೆ ಎಂದರೆ ಅತಿಶಯೋಕ್ತಿಯಾಗಲಾರದು.

2000ನೇ ಇಸವಿಯ ನವೆಂಬರ್ ತಿಂಗಳಲ್ಲಿ ಅಸ್ಸಾಂ ರೈಫಲ್‌ನ ಸೇನಾಪಡೆಗಳು(ಎಫ್‌ಎಸ್‌ಪಿಎಪಡೆ) ಮಾಲೋಂ ಎಂಬ ಪುಟ್ಟ ನಗರಕ್ಕೆ ನುಗ್ಗಿ ಅಲ್ಲಿದ್ದ ಜನರ ಮೇಲೆ ಏಕಾಏಕಿ ಗುಂಡುಹಾರಿಸಿದ್ದರ ಪರಿಣಾಮ 10 ಮಂದಿ ಸ್ಥಳದಲ್ಲೇ ಮೃತಪಟ್ಟರು. ಇದ–ರಿಂದಾಗಿ ಮಾನಸಿಕವಾಗಿ ಜರ್ಜ–ರಿತವಾದ ಇರೋಮ್ ಎಫ್‌ಎಸ್‌ಪಿಎ ಪಡೆಯ ವಿಶೇಷ ಅಧಿಕಾರವನ್ನು ಕೇಂದ್ರ ಸರಕಾರವು ಹಿಂತೆಗೆದುಕೊಳ್ಳಬೇಕೆಂಬ ಹಠ ತೊಟ್ಟು ಅಮರಾಣಾಂತ ಉಪವಾಸ ಕೈಗೊಂಡರು. ಅದರಂತೆ ನವೆಂಬರ್ 2, 2000ರಲ್ಲಿ ಅಮರಣಾಂತ ನಿರಶನ ಆರಂಭಿಸಿದಳು. ಎಫ್‌ಎಸ್‌ಪಿಎ ಪಡೆ ಬಗ್ಗೆ ತಿಳಿಸುವುದಾದರೆ 1958ರಲ್ಲಿ ಈ ಕಾಯಿದೆಯನ್ನು ಸಂಸತ್ತಿನಲ್ಲಿ ಅನುಮೋದನೆಗೊಳಿಸಲಾಯಿತು. ಈ ಕಾಯಿದೆಯ ವಿಶೇಷ ಅಂದರೆ ಈಶಾನ್ಯ ಭಾರತದ ಏಳು ರಾಜ್ಯಗಳಲ್ಲಿ ಈ ಪಡೆಗಳಿಗೆ ಸಂಪೂರ್ಣ ಅಧಿಕಾರ ನೀಡಲಾಯಿತು. ಇದರ ಮೂಲಕ ಇವರು ಅನುಮಾನ ಬಂದಲ್ಲಿ ಯಾರನ್ನು ಬೇಕಾದರೂ ಬಂಧಿಸಬಹುದು, ಗುಂಡಿಕ್ಕಿ ಕೊಲ್ಲಬಹುದು. ಈ ಬಗ್ಗೆ ಯಾರೂ ಪ್ರಶ್ನೆ ಮಾಡುವಂತಿಲ್ಲ. ಭಯೋತ್ಪಾದನೆ ಮತ್ತು ರಾಷ್ಟ್ರೀಯ ಭದ್ರತೆ ಹೆಸರಲ್ಲಿ ಈ ಅಧಿಕಾರವನ್ನು ಈ ಪಡೆಗೆ ನೀಡಿದ್ದರು. ಆದರೆ ಇವರುಗಳು ಈ ಅಧಿಕಾರವನ್ನು ತಮಗೆ ಇಚ್ಚೆ ಬಂದಂತೆ ಬಳಸುತ್ತಾರೆಂಬ



ಆರೋಪ ಇರೋಮ್‌ಳದ್ದು. ಇನ್ನು ತಾನು ಉಪವಾಸ ಕೈಗೊಂಡಾಗ ಆಕೆಗೂ ಗೊತ್ತಿರಲಿಲ್ಲವೇನೋ ಈ ಉಪವಾಸ ದಿನಕಳೆದು ವರ್ಷಗಳೇ ಉರುಳುತ್ತವೆಂದು. ವಿಪರ್ಯಾಸ ಎಂದರೆ ಈಕೆಯ ಹೋರಾಟಕ್ಕೆ ಯಾವುದೇ ಸರಕಾರ ಕಿವಿಗೊಡಲಿಲ್ಲ. ಅದರ ಬದಲು ಆಕೆಯನ್ನೇ ಬಂಧಿಸಿ ಹತ್ತಿಕ್ಕುವ ಕಾರ್ಯವನ್ನು ಹಲವು ಸರಕಾರಗಳು ಮಾಡಿತು.

ಈ ಮಧ್ಯೆ ಆಕೆಯ ಮೇಲೆ ಸರಕಾರವು ಸ್ವಯಂ ಪ್ರೇರಿತವಾಗಿ ಕೇಸ್ ಹಾಕಿ ಬಲವಂತವಾಗಿ ಇಂಫಾಲ್‌ನ ಜವಹಾರ್‌ಲಾಲ್ ಇನ್ಸ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಸ್ಪತ್ರೆಯಲ್ಲಿ 15–10 ಅಗಲ ಅಡಿಯ ಸ್ಪೆಶಲ್ ವಾರ್ಡ್‌ನಲ್ಲಿರಿಸಿ ಮೂಗಿನ ಮೂಲಕ ಬಲವಂತವಾಗಿ ದ್ರವಹಾರ ನೀಡಲಾಗುತಿತ್ತು. ಮತ್ತೊಂದು ವಿಶೇಷ ಎಂದರೆ ಈಕೆ 13 ವರ್ಷದಿಂದ ಮತದಾನವನ್ನೇ ಮಾಡಲಿಲ್ಲ. ಈಗ ಈಕೆ ಆಗಸ್ಟ್ 9ರಂದು ತನ್ನ ಅಮರಣಾಂತ ಉಪವಾಸಕ್ಕೆ ಇತಿಶ್ರೀ ಹಾಡಿದ್ದಾರೆ. ವೈದ್ಯೆಯಾಗಬೇಕೆಂಬ ಮಹದಾಸೆ ಇದ್ದ ಇರೋಮ್ ಶರ್ಮಿಳಾ ತನ್ನ 28ನೇ ವಯಸ್ಸಿನಲ್ಲಿ ಉಪವಾಸ ಕೈಗೊಂಡು ಬರೋಬ್ಬರಿ 16 ವರ್ಷಗಳ ನಂತರ ಕೈಬಿಟ್ಟಿದ್ದಾರೆ. ಈ ಮೂಲಕ ಜಗತ್ತಿನಲ್ಲಿ ಅತೀ ಹೆಚ್ಚು ಸಮಯ ಉಪವಾಸ ಕೈಗೊಂಡ ಹೆಗ್ಗಳಿಕೆ ಈಕೆಗೆ ಇದೆ. ಈ ಅಮರಾಣಾಂತ ಉಪವಾಸ ಕೈಬಿಟ್ಟ ನಂತರ ಪ್ರಜಾಪ್ರಭುತ್ವದಲ್ಲಿ ಸಕ್ರಿಯವಾಗಿ ಭಾಗವಹಿಸುವ ಇಚ್ಚೆ ಹೊಂದಿದ್ದಾರೆ. ಹಾಗೂ 2017ರ ಮಣಿಪುರದಲ್ಲಿ ನಡೆಯುವ ಸಾರ್ವತ್ರಿಕ ವಿಧಾನಸಭೆ ಚುನಾವಣೆಯಲ್ಲಿ ಸ್ಪಧಿಸುವ ಆಸೆ ಇಟ್ಟುಕೊಂಡಿದ್ದಾರೆ. ಅವರು ತಾನು ಸ್ವತಂತ್ರವಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ ಎಂಬ ಹೇಳಿಕೆಯನ್ನೂ ನೀಡಿದ್ದಾಳೆ. ಇದಕ್ಕೂ ಮೊದಲು ಅಂ–ದರೆ 2014ರ ಲೋಕಸಭೆ ಚುನಾವಣೆ ವೇಳೆ ಎರಡು ರಾಷ್ಟ್ರೀಯ ಪಕ್ಷಗಳು ಚುನಾವಣೆಗೆ ನಿಲ್ಲುವಂತೆ ಆಹ್ವಾನ ನೀಡಿತ್ತು. ಆದರೆ ಇರೋಮ್ ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆಂಬ ಕುತೂಹಲ ಎಲ್ಲರಲ್ಲಿ ಮೂಡಿದೆ. ಈಕೆಯ ಉಪವಾಸ ಅಂತ್ಯಕ್ಕೆ ಆಕೆಯ ಕೆಲವು ಬೆಂಬಲಿಗರಿಂದಲೇ ವಿರೋಧ ವ್ಯಕ್ತವಾಗಿದೆ. ಏನೇ ಆಗಲಿ ಆಕೆ ಉಪವಾಸ ಸತ್ಯಾಗ್ರಹ ಮಾಡಿ ತನ್ನ ಜೀವ ಕಳೆದುಕೊಳ್ಳಲಿ ಎಂಬುವುದು ಮಾನವ ಧರ್ಮ ಅಲ್ಲ. ಇನ್ನು ಮುಂದಾದರೂ ಆಕೆ ಪ್ರಜಾಪ್ರಭುತ್ವದ ಅಡಿಯಲ್ಲಿ ತನ್ನ ಹೋರಾಟ ನಡೆಸಲಿ ಮತ್ತು ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ತಲುಪಿಸಲಿ ಎಂಬುವು ಆಕೆಯ ಅಭಿಮಾನಿ ಜೊತೆಗೆ ಬೆಂಬಲಿಗರ ಅಭಿಪ್ರಾಯ.

**■ ರಾಜೇಶ್ ಫೆರಾವೋ**

# ಹಿರಿಯ ಕಲಾವಿದ ಕುಡುಪು ವಿಶ್ವನಾಥ ದೇವಾಡಿಗ

ಕುಡುಪು ವಿಶ್ವನಾಥ ದೇವಾಡಿಗರು ತನ್ನ ಬಾಲ್ಯದ ಹತ್ತನೇ ವರ್ಷದ ವಯಸ್ಸಿನಲ್ಲಿ ಸಂಗೀತ ಅಭ್ಯಾಸವನ್ನು ಕಲಿತರು. ತಂದೆ ಶಿವಪ್ಪ ಸೇರಿಗಾರ–ರಿಂದ ಕ್ಲಾರಿಯೋನೆಟ್ ಅಭ್ಯಾಸ ಮಾಡಿ ಬಳಿಕ ಸ್ಯಾಕ್ಸೋಫೋನ್ ವಿದ್ವಾಂಸ ಕಾಂತಪ್ಪ ಸೇರಿಗಾರರವರಲ್ಲಿ ಸ್ಯಾಕ್ಸೋ ಫೋನ್ ಅಭ್ಯಾಸ ಮಾಡಿದರು. ಇವರ ಸಂಗೀತ ಅಭ್ಯಾಸದ ಮುಂದೆ ಸ್ಯಾಕ್ಸೋಫೋನನ್ನು ಶಾಸ್ತ್ರೀಯವಾಗಿ ಅಳವಡಿಸಿದ ವಿದ್ವಾಂಸ ದಿವಂಗತ ವೆಂಕಟಪ್ಪ ಡೋಗ್ರ ಇವರಲ್ಲಿ ಸುಮಾರು ಹತ್ತು ವರ್ಷ ಅಭ್ಯಾಸ ಮಾಡಿ ಒರ್ವ ಪರಿಪೂರ್ಣ ಕಲಾವಿದರಾಗಿ ರೂಪುಗೊಂಡರು.



1995 ರಿಂದ ಕುಡುಪು ಶ್ರೀ ಅನಂತ ಪದ್ಮನಾಭ ದೇವಸ್ಥಾನದಲ್ಲಿ ಸೇವೆ ಮಾಡಲು ಆರಂಭಿಸಿದಂದಿನಿಂದ ಇವರ ಹೆಸರು ವಿಶ್ವನಾಥ ದೇವಾಡಿಗ ಕುಡುಪು ಎಂದು ಪ್ರಸಿದ್ಧಿಗೊಂಡಿತು. ಇವರು ತಮ್ಮ ಸಂಗೀತ ಕಚೇ–ರಿಯನ್ನು ಮೈಸೂರು ಅರಮನೆ, ಇಸ್ಕಾನ್ ಬೆಂಗಳೂರು, ಧರ್ಮಸ್ಥಳ, ಸುಬ್ರಮ್ಮಣ್ಯ, ಉಡುಪಿ ಶ್ರೀ ಕೃಷ್ಣ ಮಠದ ರಾಜಾಂಗಣ, ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನ, ಮಧೂರು, ಕಾಸರಗೂಡು ಮಲ್ಲ ದೇವಸ್ಥಾನ, ಬಪ್ಪನಾಡು, ತಿರುವಾಯೂರು ತ್ಯಾಗರಾಜ ಉತ್ಸವದಲ್ಲಿ ನೀಡಿರುವರು.

ಕುಡುಪು ಶ್ರೀ ಅನಂತ ಪದ್ಮನಾಭ ದೇವರ ಸನ್ನಿಧಾನದಲ್ಲಿ ಸೇವೆ ಆರಂಭಿಸಿದಂದಿನಿಂದ ಇವರು ಪ್ರಧಾನ ಕಲಾವಿದರಾಗಿ ಕಚೇರಿ ನೀಡಿರುವರು.

ದಕ್ಷಿಣ ಕನ್ನಡ ಜಿಲ್ಲೆಯ ಒರ್ವ ಹಿರಿಯ ಕಲಾವಿದನಾಗಿರುವ ಇವರು ಸುಮಾರು ಮೂರು ದಶಕಗಳ ಕಲಾ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದು, ಇವರಿಗೆ ಅನೇಕ ಪ್ರಶಸ್ತಿಗಳೂ ಸಂದಿದೆ. ಇವರ ಕಲಾ ಪ್ರೇರಣೆಯಿಂದ ಮಗ ಸೂರಜ್ ದೇವಾಡಿಗ ಕುಡುಪು ಇಂದು ಜಿಲ್ಲೆಯ ಪ್ರಮುಖ ಸ್ಯಾಕ್ಸೋಫೋನ್ ಕಲಾವಿದನಾಗಿ ಗುರುತಿಸಲ್ಪಟ್ಟಿದ್ದು, ಸೂರಜ್ ದೇವಾಡಿಗರ ಕಲಾ ಸೇವೆಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯೂ ಸಂದಿದೆ. ಇವರ ಪ್ರೇರಣೆಯಿಂದ ಇಂದು ಅನೇಕ ಕಲಾವಿದರೂ ಹೊರಹೊಮ್ಮಿದ್ದಾರೆ.

**■ ಇರ್ಫಾನ್ ನೆಕ್ಕಿಲಾಡಿ**

**ವಿದ್ಯಾರ್ಥಿ ಸಂಪಾದಕರು**

ರಾಜೇಶ್ ಫೆರಾವೋ
ಇರ್ಫಾನ್
ಶ್ರೇಯಾ ಶೆಟ್ಟಿ
ಅಹಮ್ಮದ್ ಬಾವ
ಮುಹಮ್ಮದ್ ಶರೀಫ್
ಸುಮಾ.ಎನ್

ಸಂಪಾದಕರು ಹಾಗೂ ಪ್ರಕಾಶಕರು: ಪ್ರೊ. ವಹೀದಾ ಸುಲ್ತಾನ, ಅಧ್ಯಕ್ಷರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – 574199 ದ.ಕ, ಕಾರ್ಯಕಾರಿ ಸಂಪಾದಕರು: ಪ್ರೊ. ಜಿ. ಪಿ. ಶಿವರಾಂ. ಮುದ್ರಕರು: ನೆಡ್ ಪ್ರಿಂಟ್, ಯೆಯ್ಯಾಡಿ–575 008